ಬೆಂಬಲ : ಹತ್ತು ರೂಪಾಯಿ

# ದುಡಿಯೋರ ಹೋರಾಟ

'ನವ ಸಮಾಜವಾದಿ ಪರ್ಯಾಯ'ದ ಪತ್ರಿಕೆ

**ಯುವಜನತೆ – ದುಡಿಯುವ ವರ್ಗದ ಏಕತೆ ಮತ್ತು ಸಮಸಮಾಜಕ್ಕಾಗಿ**

ಸಂಪುಟ-12 | ಸಂಚಿಕೆ-1 | ಜನವರಿ - ಫೆಬ್ರುವರಿ 2016 | ಬೆಲೆ 5 ರೂ.

## ಕಡಿಮೆ ಕೂಲಿ–ವೇತನ ಪಡೆದು ಸಮಾಜದ ಸೇವೆ ಮಾಡುವ ಎಲ್ಲಾ ಕಾರ್ಮಿಕರನ್ನು ದಯನೀಯ ಪರಿಸ್ಥಿತಿಯಲ್ಲಿ ಜೀವ ಸವೆಸುವಂತೆ ಮಾಡಿರುವ ಮಾಲಿಕ ವ್ಯವಸ್ಥೆಗೆ ಧಿಕ್ಕಾರ!




# Minimum ₹100 an Hour

## ಲಾಭಕೋರ ಬಂಡವಾಳಿ ವ್ಯವಸ್ಥೆ – ಜಾತೀಯತೆ – ಅಸಮಾನತೆ – ಲೈಂಗಿಕ ತಾರತಮ್ಯ – ಪುರುಷಾಧಿಕ್ಯ – ಕೋಮುವಾದಕ್ಕೆ ಧಿಕ್ಕಾರ !

# ಸಮಾಜವಾದಿ ಪರ್ಯಾಯವನ್ನು ನಿರ್ಮಿಸಿ

New Socialist Alternative, Indian section of the Committee for a Workers' International(CWI)
P.O. BOX # 1828, Bangalore - 560 018. ✆ 080-2674 2616 newsocialist.in@gmail.com
www.socialism.in www.socialistworld.net

# ಮೋದಿ ಮೋಡಿ ಬಯಲಾಗುತ್ತಿದೆ.....

ಇದೀಗ ಕಳೆದ 2015ರ ರಾಜಕೀಯ ಪ್ರಕ್ರಿಯೆ, ಒಂದು ರೀತಿಯಲ್ಲಿ ವಿಚಿತ್ರ ಮಿಶ್ರಣವಾಗಿತ್ತು. 2014ರ ಮೇ ತಿಂಗಳಲ್ಲಿ ಗದ್ದುಗೆ ಏರಿದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ–ಆರ್‌ಎಸ್‌ಎಸ್ ಆಡಳಿತ ಈ ದೇಶದ ಎಲ್ಲಾ ಜಾತಿವಾದಿ–ಕೋಮುವಾದಿ ಪುರೋಗಾಮಿ ಶಕ್ತಿಗಳಿಗೆ ಕುಮ್ಮಕ್ಕು ನೀಡಿತು. ಬಂಡವಾಳಿವರ್ಗ, ಜಮೀನ್ದಾರಿ ಶಕ್ತಿಗಳು, ವ್ಯಾಪಾರ–ವಹಿವಾಟುದಾರರು ಮತ್ತು ಬಹುತೇಕ ಕಾರ್ಪೋರೇಟ್ ಕೃಪಾಪೋಷಿತ ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ನಿಸ್ಸಂದೇಹವಾಗಿ ಮೋದಿ ಆಡಳಿತಕ್ಕೆ ಕೆಂಪುಹಾಸಿನ ಸ್ವಾಗತವಿತ್ತರು. ಆದರೆ ಸಾಮಾಜಿಕವಾಗಿ ಚಂಚಲ ಚಿತ್ತರಾದ ಸಂಬಳಗಾರ ಮಧ್ಯಮವರ್ಗವೂ ಸೇರಿದಂತೆ ಸಾಮಾನ್ಯ ದುಡಿಯುವ ಜನತೆ ಹಾಗೂ ಗ್ರಾಮೀಣ ಜನತೆ ಮೊದಲಿಗೆ  ವಿಚಲಿತರಾಗಿ ಪ್ರಚಾರದ ಅಬ್ಬರಕ್ಕೆ ಬೆರಗಾದರೂ, ನಿಧಾನವಾಗಿಯಾದರೂ ಸಾಮಾಜಿಕ ಹಾಗೂ ಆರ್ಥಿಕ ವಾಸ್ತವಗಳ ಒತ್ತಡಗಳಿಂದಾಗಿ ಮೋದಿ ಸನ್ನಿಪಾತದಿಂದ ದೂರಾಗುತ್ತಿದ್ದಾರೆ.

2015ರ ನವೆಂಬರ್ ತಿಂಗಳಿನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ, ಬಿಹಾರದಲ್ಲಿ ಅನುಭವಿಸಿದ ಹೀನಾಯ ಚುನಾವಣಾ ಸೋಲು, ಪ್ರತಿಗಾಮಿ ಕೋಮುವಾದಿ ಅಬ್ಬರ ಹಾಗೂ ಪ್ರಚಾರಗಳ ಮಿತಿಯನ್ನು ಸ್ಪಷ್ಟಪಡಿಸಿದೆ. ಆರ್‌ಎಸ್‌ಎಸ್‌ನ ಹಿಂದೂ ಮತಾಂಧ ಬಹುಸಂಖ್ಯಾತವಾದದ ಟೊಳ್ಳುತನವನ್ನು ಬಯಲಾಗಿಸಿದೆ. ಇಂದಿಗೂ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಬಹುಪಾಲು ಭಾರತ ಸಂಜಾತ ಕಾರ್ಪೋರೇಟ್‌ಗಳು ಮೋದಿ ಪ್ರೇರಿತ ತೀವ್ರ ಆರ್ಥಿಕ ಪದ್ಧತಿಗಳನ್ನೇ ಬೆಂಬಲಿಸುತ್ತಿದ್ದಾರೆಂಬುದು ವಾಸ್ತವ. ಆದರೆ ಬಿಜೆಪಿ ಆಶ್ರಯದಾಣದಲ್ಲಿರುವ ಪ್ರತಿಗಾಮಿ–ಕೋಮುವಾದಿ ಗೂಂಡಾಗಳು ಅವಿರತವಾಗಿ ಉಂಟುಮಾಡುತ್ತಿರುವ ಸಾಮಾಜಿಕ ಕ್ಷೋಭೆ ಮತ್ತು ಛಿದ್ರಕಾರಿ ಪರಿಸ್ಥಿತಿ, ಇನ್‌ಫೋಸಿಸ್, ಗೂಗಲ್‌ನಂತಹ ಹಲವು ಪ್ರತಿಷ್ಟಿತ ಕಂಪನಿಗಳ ಮಾಲಿಕರನ್ನು ಆತಂಕಗೊಳಿಸಿ ಸಾರ್ವಜನಿಕವಾಗಿ ಟೀಕಿಸುವಂತೆ ಮಾಡಿದೆ. ರಿಸರ್ವ್ ಬ್ಯಾಂಕಿನ ಮುಖ್ಯಸ್ಥರು ಸಹ, ದೇಶದಲ್ಲಿ ಹೆಚ್ಚುತ್ತಿರುವ ಅಸಹನೆಯ ವಾತಾವರಣ ಒಟ್ಟಾರೆ ವಹಿವಾಟಿನ ಲಾಭ ಗಳಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಉದ್ಗರಿಸಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ, 2016ರ ಮಧ್ಯಕಾಲದವರೆಗೆ ಯಾವುದೇ ರಾಜ್ಯದ ಚುನಾವಣೆಗಳು ಇಲ್ಲದಿರುವುದರಿಂದ, ಹಿಂದುತ್ವವಾದವನ್ನು ಪ್ರತಿಪಾದಿಸುವ ಗೂಂಡಾ ಸಂಘಟನೆಗಳೆಲ್ಲವನ್ನು ಬಹುತೇಕ ಅಂಕೆಯಲ್ಲಿಡಲಾಗಿದೆ. ಆದರೆ 'ದುಡಿಯೋರ ಹೋರಾಟ' ಪತ್ರಿಕೆ ತನ್ನ ಅಂತರ್ಜಾಲ ಮಾಧ್ಯಮದಲ್ಲಿ (http://www.socialism.in/index.php/is-modimania-on-the-wane/)ಬರೆದಿರುವಂತೆ ಆರ್‌ಎಸ್‌ಎಸ್–ಬಿಜೆಪಿಗಳು ಈ ದೇಶದಲ್ಲಿ ಕೋಮು ಆಧಾರಿತ ಧ್ರುವೀಕರಣವನ್ನು ಕುತಂತ್ರದಿಂದ ಹೇರುತ್ತಿದ್ದಾರೆ.

ಜಾಗತಿಕ ಮಟ್ಟದಲ್ಲಿ ಬಂಡವಾಳಿವರ್ಗದ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಐಎಂಎಫ್ ಮತ್ತು ವಿಶ್ವ ಬ್ಯಾಂಕ್‌ನಂತಹ ಸಂಸ್ಥೆಗಳು, ಭಾರತದ ಆರ್ಥಿಕತೆ ಶರವೇಗದಲ್ಲಿ ಮುನ್ನುಗಲಿದೆ ಎಂಬ ಭವಿಷ್ಯ ನುಡಿದಿದ್ದಾರೆ. ಅದಲ್ಲದೆ ತ್ವರಿತವಾಗಿ ಖಾಸಗೀಕರಣ ಹೊಂದುತ್ತಿರುವ ಹಲವಾರು ಕ್ಷೇತ್ರಗಳು ಹೆಚ್ಚಿದ ನೇರ ವಿದೇಶಿ ಬಂಡವಾಳವನ್ನು ಆಕರ್ಷಿಸುತ್ತಿರುವುದೂ ದಿಟ. ಹೀಗಿದ್ದಾಗ್ಯೂ ಭಾರತದಲ್ಲಿನ ವಾಸ್ತವವಾದ ಆರ್ಥಿಕ ಪರಿಸ್ಥಿತಿಯ  ನಿಜ ಆರೋಗ್ಯವನ್ನು, ಕಣ್ಣಿಗೆ ರಾಚುವ ಅಂಕಿಅಂಶಗಳು ಬೇರೆಯೇ ಕಥೆಯನ್ನು ಸಾರುತ್ತಿವೆ.

ಮೋದಿ ಮತ್ತು ಬಿಜೆಪಿ " ಅಚ್ಚೇ ದಿನ್"(ಒಳ್ಳೆಯ ದಿನಗಳು) ಪೊಳ್ಳು ಘೋಷಣೆಯ ಮೂಲಕ ಜನಪ್ರಿಯತೆಯನ್ನು ಗಳಿಸಿ ಅಧಿಕಾರಕ್ಕೆ ಬಂದರೂ, ವಿಶಾಲ ಜನಸಮುದಾಯ ಮತ್ತು ದುಡಿಮೆಗಾರ ಕುಟುಂಬಗಳ ಆದಾಯ ಕ್ರಮೇಣ ಜಾರುತ್ತಿದ್ದು, ಕೊಳ್ಳುವ ಶಕ್ತಿ ದಿನಂಪ್ರತಿ ಕುಂಠಿತವಾಗುತ್ತಿದೆ. ಕಾರ್ಖಾನೆಗಳ ನಿವ್ವಳ ಉತ್ಪಾದನೆ 2015ರ ನವೆಂಬರ್ ತಿಂಗಳಲ್ಲಿ ಶೇ.3.2ರಷ್ಟು ಸಂಕುಚಿತ ಗೊಂಡಿದ್ದು, ರಖಂ ಹಣದುಬ್ಬರ 2015ರ ಡಿಸೆಂಬರ್ ತಿಂಗಳಲ್ಲಿ ಶೇ5.61ಕ್ಕೆ ಏರಿದೆ.

2016ರ ಜನವರಿ ಎರಡನೆಯ ವಾರಕ್ಕೆ ಭಾರತದ ರೂಪಾಯಿಯ ಮೌಲ್ಯ ಒಂದು ಅಮೇರಿಕನ್ ಡಾಲರ್‌ಗೆ ಅತ್ಯಂತ ಹೀನಾಯ ಮಟ್ಟದ ರೂ.67.59ಕ್ಕೆ ಜಾರಿತ್ತು, ಈ ಮೌಲ್ಯ ಕಳೆದ 28 ತಿಂಗಳುಗಳ ಅವಧಿಯಲ್ಲಿ ಅತ್ಯಂತ ಕೆಳಮಟ್ಟದಾಗಿತ್ತು. ಏಷ್ಯಾದ ಇನ್ನಿತರ ಕರೆನ್ಸಿಗಳೂ ಹೀನಾಯವಾಗಿ ಇಳಿದಿದ್ದು ಜಾಗತಿಕ ಮಟ್ಟದಲ್ಲಿ ಚೈನಾ ದೇಶದ ಆರ್ಥಿಕ ಬಿಕ್ಕಟ್ಟು ಮತ್ತು ತಳಮಳಗಳು ಖಂಡಿತವಾಗಿ ನೆರೆ ದೇಶವಾದ ಭಾರತದ ಮೇಲೆ ಹೆಚ್ಚಿನ ಪ್ರತಿಕೂಲ ಪರಿಣಾಮ ಬೀರಿದೆ. "ಮೇಕ್ ಇನ್ ಇಂಡಿಯಾ" ಘೋಷಣೆಗೆ ಸಿಕ್ಕ ಅಬ್ಬರದ ಪ್ರಚಾರ ಇಂದು ಸಾಮಾಜಿಕ ಮಾಧ್ಯಮತಾಣಗಳಲ್ಲಿ ಹಾಸ್ಯಕ್ರೀಡಾಗಿದೆ. ನಗರವಾಸಿ ವಿದ್ಯಾರ್ಥಿ, ಕಾರ್ಮಿಕ ಸಮುದಾಯ ಮತ್ತು ಗ್ರಾಮೀಣ ರೈತಾಪಿ ಜನರು ಹಣದುಬ್ಬರ, ಏರುತ್ತಿರುವ ಬೆಲೆಗಳು ಹಾಗೂ ನಿರುದ್ಯೋಗದ ಹಾವಳಿಗೆ ತುತ್ತಾಗಿ ವ್ಯಗ್ರಗೊಂಡಿದ್ದಾರೆ.

ಮೋದಿ ಮತ್ತು ಬಿಜೆಪಿಗಳ ಸಮಾಜ ವಿಭಜನಕಾರಿ ಮತ್ತು ಆರ್ಥಿಕವಾಗಿ ಬಡವಿರೋಧಿ ನೀತಿ ಪ್ರಣಾಳಿಗಳ ವಿರುದ್ಧ ಪ್ರತಿಭಟನೆ ಹಲವೆಡೆ ವ್ಯಕ್ತಗೊಂಡಿದ್ದು ಹಲವು ಚದುರಿದ ರೀತಿಯಲ್ಲಿ ಸಾಗುತ್ತಿವೆ. ಆರ್‌ಎಸ್‌ಎಸ್ ನೇತೃತ್ವದಲ್ಲಿರುವ ಪ್ರತಿಗಾಮಿ ಶಕ್ತಿಗಳು ಮೋದಿ ಆಡಳಿತ ಎದುರಿಸುತ್ತಿರುವ ವಿರೋಧವನ್ನು ತಮ್ಮ ಕುಚಾತುರ್ಯದಿಂದ ಒಡೆದಿದ್ದು, ಹಲವಾರು ವಿರೋಧಿ ಪಾಳಯಗಳ ರಣತಂತ್ರಗಳನ್ನು ತಮ್ಮದಾಗಿಸಿಕೊಂಡು ಆ ಚಳುವಳಿಗಳ ದಿಕ್ಕೆಡಿಸಿದೆ. ಭಾರತದ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಜಾತಿವಾದದ ಪಿಡುಗನ್ನು ದುರುಪಯೋಗ ಮಾಡಿಕೊಂಡು ತುಳಿತಕ್ಕೊಳಗಾದ ಶೋಷಿತ ಸಮುದಾಯಗಳನ್ನು ಒಡೆದಿದೆ. 'ನಾವೆಲ್ಲಾ ಹಿಂದು – ನಾವೆಲ್ಲಾ ಒಂದು' ಎಂಬ ಖೋಟಾ ಒಗ್ಗಟ್ಟಿನ ಪ್ರತಿಪಾದನೆ ಮಾಡಿ ಕೆಳಸ್ತರದ ಜನ ಸಮುದಾಯಗಳ ನಡುವೆ "ಹಿಂದೂ ರಾಷ್ಟ್ರ"ದ ಠಕ್ಕಿನ ರಾಷ್ಟ್ರವಾದವನ್ನು ಮುಂದಿಟ್ಟಿದೆ.

ಹಿಂದೆ ಕಾಂಗ್ರೇಸ್ ಪಕ್ಷ ಪ್ರತಿನಿಧಿಸುತ್ತಿದ್ದ ಭಾರತದ ದೊಡ್ಡ ಬಂಡವಾಳಿ ವರ್ಗ, ಈ ದೇಶದ ಜನತೆ ಎದುರಿಸುತ್ತಿರುವ ಯಾವುದೇ ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಕಂಡಿರುವ ವೈಫಲ್ಯತೆಯನ್ನು, ಇಂದು ಆರ್‌ಎಸ್‌ಎಸ್/ಬಿಜೆಪಿಗಳಂತಹ ವಿಭಜನಕಾರಿ ಶಕ್ತಿಗಳು ಉಪಯೋಗಿಸಿಕೊಂಡು ಅತ್ಯಂತ ತೀವ್ರವಾದ ಸಾಮಾಜಿಕ ಮತ್ತು ರಾಜಕೀಯ ತಳಮಳಗಳನ್ನು ಪ್ರಚೋದಿಸುತ್ತಿದ್ದು, ಇದರ ಒಟ್ಟಾರೆ ಪ್ರತಿಕೂಲ ಪರಿಣಾಮ ಇಡೀ ಉಪಖಂಡದ ಮೇಲೆ ಬೀರುವ ಭಯ ಆವರಿಸಿದೆ.

ಇತ್ತೀಚೆಗೆ ಪಠಾಣ್ ಕೋಟ್ ವಾಯುನೆಲೆಗಳ ಮೇಲೆ ನಡೆದ ಪಾಕಿಸ್ತಾನದ ಜೈಷ್–ಇ–ಮಹಮ್ಮದ್ ಉಗ್ರಗಾಮಿ ದಾಳಿ, ಹಠಾತ್ತನೆ ಎರಡು ದೇಶಗಳ ನಡುವೆ ರಾಜಕೀಯ ಉಷ್ಣತೆಯನ್ನು ಹೆಚ್ಚಿಸಿ ಯುದ್ಧ ಭೀತಿಯನ್ನು ನಿರ್ಮಾಣ ಮಾಡಿತ್ತು. ಮೋದಿ–ಷರೀಫ್‌ರ ಚಹಾ ಮತ್ತು ಹುಟ್ಟು ಹಬ್ಬಗಳ ರಾಯಭಾರಿತನ ನಡೆಯುತ್ತಿರುವಾಗಲೇ ಮಿಲಿಟರಿ ಕಾರ್ಯಾಚರಣೆಯ ಸಂಭಾವ್ಯಗಳು ಚರ್ಚೆಯಾಗಿ ಅಮೇರಿಕದ ಆಡಳಿತ ಕೂಡ ಆತಂಕಗೊಂಡು ಪಾಕಿಸ್ತಾನದ ವರಿಷ್ಠರಿಗೆ ಜೈಷ್–ಇ–ಮಹಮ್ಮದ್‌ನ ವಿರುದ್ಧ ತಕ್ಷಣ ಕಾರ್ಯಾಚರಣೆ ಮಾಡುವಂತೆ ತಾಕೀತು ಮಾಡಿತು. ಈ ರೀತಿಯ ಉಲ್ಬಣಗೊಂಡ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯು ಮತ್ತಷ್ಟು ಬಿಗಾಡಯಿಸದಂತೆ ತಡೆಯ ಬೇಕಾದಲ್ಲಿ ಭಾರತದ ಶೋಷಿತ ಜನರ, ದುಡಿಯುವ ವರ್ಗದ ಮತ್ತು ದಲಿತ–ಮಹಿಳಾ ಮತ್ತು ಪ್ರಗತಿಶೀಲರ ಒಗ್ಗಟ್ಟಿನ ಹೋರಾಟಗಳು ಚುರುಕಾಗಬೇಕಾಗಿದೆ.

–ಸಂ.

ದುಡಿಯೋರ ಹೋರಾಟ
Workers' Struggle
VOICE OF THE NEW SOCIALIST ALTERNATIVE

ಸಂಪಾದಕ : ಜಗದೀಶ್.ಜಿ.ಸಿ
ನಿರ್ವಾಹಕ ಸಂಪಾದಕ : ವಿಶ್ವನಾಥ್. ಎಸ್.
ಸಂಪಾದಕ ಮಂಡಳಿ : ಆನಂದ್‌ಕುಮಾರ್, ನಾಗರತ್ನ.ವಿ

## ನವ ಸಮಾಜವಾದಿ ಪರ್ಯಾಯ
## New Socialist Alternative
## ನಮ್ಮ ನಿಲುವು

ಯುವಜನತೆ : ಪದವಿಪೂರ್ವ ಶಿಕ್ಷಣದವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣಬೇಕು. ಜನರ ಬಳಕೆಯಲ್ಲಿರುವ ಎಲ್ಲಾ ಭಾಷೆಗಳಲ್ಲಿ ಬೋಧನೆ ಅವಕಾಶ. ಖಾಸಗಿ ಕಾಲೇಜುಗಳ, ಪಾಲಿಟೆಕ್ನಿಕ್‌ಗಳ ಕಡ್ಡಾಯ ರಾಷ್ಟ್ರೀಕರಣ. ಡೋನೇಷನ್, ಕ್ಯಾಪಿಟೇಷನ್ ಶುಲ್ಕ ಕೇಳುವವರಿಗೆ ಉಗ್ರ ಶಿಕ್ಷೆ. ಹದಿನಾರು ದಾಟಿದ ಎಲ್ಲಾ ಯುವಕ ಯುವತಿಯರಿಗೂ ಉದ್ಯೋಗ, ಶಿಕ್ಷಣ ಮುಂದುವರೆಸುವವರಿಗೆ ವಿದ್ಯಾರ್ಥಿ ವೇತನದ ಸೌಲಭ್ಯ, ತಾಂತ್ರಿಕ ಶಿಕ್ಷಣ ಮತ್ತು ತರಬೇತಿ, ನಿರುದ್ಯೋಗ ಭತ್ಯೆ. ಎಲ್ಲರಿಗೂ ಸಮಾನ ಅವಕಾಶ, ಜಾತಿ, ಭಾಷೆ, ಧರ್ಮ ಮತ್ತು ಲಿಂಗಭೇದಗಳ ನಿರ್ಮೂಲನ.

ಮಹಿಳೆ : ಉದ್ಯೋಗ ಮೂಲಭೂತ ಹಕ್ಕಾಗಬೇಕು. ದುಡಿಯುವ ಸ್ಥಳಗಳಲ್ಲಿ ಲೈಂಗಿಕ ದಬ್ಬಾಳಿಕೆ ನಿಲ್ಲಬೇಕು. ಎಲ್ಲ ರಂಗಗಳಲ್ಲೂ ಸಮಾನ ಅವಕಾಶ, ಸಮಾನ ವೇತನ, ಮಕ್ಕಳ ಲಾಲನೆ ಪಾಲನೆಗಾಗಿ ಸರ್ಕಾರದಿಂದ ದಾದಿಯರ ಕೇಂದ್ರ ಹಾಗೂ ಶಿಶುಪಾಲನಾ ಕೇಂದ್ರಗಳ ವ್ಯವಸ್ಥೆ.

ಉದ್ಯೋಗಗಳು : ಯಾವುದೇ ಸಂಬಳದ ಮೊಟುಕಿಲ್ಲದ ಕೆಲಸದ ಅವಧಿಯ ಕಡಿತ, ಕಾರ್ಖಾನೆ, ಬ್ಯಾಂಕು ಮತ್ತು ಕಛೇರಿಗಳಲ್ಲಿ ವಾರಕ್ಕೆ 40 ಗಂಟೆಗಳ ಗರಿಷ್ಟ ಕೆಲಸದ ಅವಧಿ. ಈ ಮೂಲಕ ಉಳಿದ ಕೆಲಸದ ಅವಧಿಗೆ ಹೊಸ  ನೇಮಕಾತಿ.

ನೇಮಕಾತಿ ನಿಷೇಧ ಈ ತಕ್ಷಣ ರದ್ದಾಗಲಿ, ಖಾಲಿ ಇರುವ ಎಲ್ಲ ಹುದ್ದೆಗಳಿಗೂ ಒಡನೆಯೇ ನೇಮಕಾತಿಯಾಗಲಿ. ಅಂಗಡಿ ಮುಂಗಟ್ಟುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಘಂಟೆಗೆ ₹100/– ಕನಿಷ್ಟ ವೇತನ ನಿಗದಿಯಾಗಬೇಕು. 20 ಮಂದಿಗಿಂತ ಹೆಚ್ಚು ಕಾರ್ಮಿಕರಿರುವ ಎಲ್ಲ ಕಾರ್ಖಾನೆಗಳೂ, ಕಂಪನಿಗಳೂ ರಾಷ್ಟ್ರೀಕರಣವಾಗಬೇಕು. ಅದರ ನಿರ್ವಹಣೆ ಮತ್ತು ಹತೋಟಿ ಅಲ್ಲಿನ ಕಾರ್ಮಿಕರದ್ದಾಗಬೇಕು.

ಕಾರ್ಮಿಕ ಸಂಘಗಳು : ಪ್ರತಿಯೊಂದು ಕಾರ್ಖಾನೆಯಲ್ಲೂ ಪ್ರಜಾಸತ್ತಾತ್ಮಕವಾಗಿ ಆರಿಸಲ್ಪಟ್ಟ ಏಕತ್ರಿತ ಕಾರ್ಮಿಕ ಸಂಘ ಬೇಕು. ಪ್ರತಿ ವರುಷ ಗುಪ್ತ ಮತದಾನದ ಮೂಲಕ ಚುನಾವಣೆ ನಡೆಯಬೇಕು. ನಗರ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ CITU, AITUC, HMS, NTUI ಮತ್ತು ಇತರ ಕಾರ್ಮಿಕ ಸಂಘಗಳನ್ನು ಒಂದು ಸಮಾಜವಾದಿ ಕಾರ್ಯಕ್ರಮದಡಿ ಒಗ್ಗೂಡಿಸಬೇಕು. ಕಾರ್ಮಿಕರ ಪಕ್ಷಗಳು ಯಾವುದೇ ಬಂಡವಾಳಶಾಹಿ ಪಕ್ಷಗಳೊಡನೆ ರಾಜಕೀಯ ಒಪ್ಪಂದವಾಗಲೀ, ಹೊಂದಾಣಿಕೆಯಾಗಲಿ ಮಾಡಿಕೊಳ್ಳಬಾರದು. ಹೀಗೆ ಒಂದು ಸ್ವತಂತ್ರ ಸಮಾಜವಾದಿ ಶಕ್ತಿಯ ನಿರ್ಮಾಣ.

ಕಾರ್ಮಿಕ–ರೈತರ ಏಕತೆ : ಬಡರೈತ ಈ ದೇಶದ ಬೆನ್ನೆಲುಬು. ರೈತವರ್ಗ ಉತ್ತಮ ಜೀವನ ಮಟ್ಟಕ್ಕಾಗಿ ನಡೆಸುವ ಎಲ್ಲ ಹೋರಾಟಗಳಿಗೂ ನಮ್ಮ ಬೆಂಬಲ ನೀಡುತ್ತೇವೆ. ರೈತ ಬೆಳೆಯುವ ಎಲ್ಲ ಪದಾರ್ಥಗಳಿಗೆ ಅವರೇ ಚುನಾಯಿಸಿದ ಪಂಚಾಯಿತಿಗಳಿಂದ ಬೆಲೆ ನಿಗದಿಯಾಗಬೇಕು.

ದೊಡ್ಡ ಜಮೀನುದಾರರ ಎಸ್ಟೇಟು ಮತ್ತು ಆಸ್ತಿಗಳನ್ನು ಮುಟ್ಟುಗೋಲು ಹಾಕಿ, ಭೂಹೀನ, ಕೃಷಿಕಾರ್ಮಿಕರ ಚುನಾಯಿತ ಪಂಚಾಯಿತಿಗಳಿಂದ ಭೂಮಿಯ ಮರು ಹಂಚಿಕೆಯಾಗಬೇಕು. ಕೃಷಿ ಕಾರ್ಮಿಕರಿಗೆ ವರ್ಷ ಪೂರ್ತಿ ದುಡಿಮೆಯ ಅವಕಾಶ. ಅವರು ಇಷ್ಟಪಟ್ಟಲ್ಲಿ ನಗರಗಳಲ್ಲಿ ಕೆಲಸ.

ಪರಿಸರಮಿತ್ರ ಮತ್ತು ಯುದ್ಧರಹಿತ ಸಮಾಜ : ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜೀವನಯೋಗ್ಯ ಪರಿಸರಕ್ಕೆ ಹಾನಿ ಖಂಡಿತ. ಆದ್ದರಿಂದ ಈ ವ್ಯವಸ್ಥೆ ಕೊನೆಯಾಗಲೇ ಬೇಕು. ಅಣು ಬಾಂಬ್ ಮತ್ತು ಅಣು ಉದ್ಯಮ ಮಾನವ ವಿರೋಧಿ ಕಾರ್ಯಕ್ರಮಗಳು ಇದನ್ನು ಸಾರಾಸಗಟಾಗಿ ನಾವು ತಿರಸ್ಕರಿಸುತ್ತೇವೆ.

ಸಾಮ್ರಾಜ್ಯಶಾಹಿಗೆ ಧಿಕ್ಕಾರ : 'ನೂತನ ಜಾಗತಿಕ ವ್ಯವಸ್ಥೆ'ಯ ಹೆಸರಿನಲ್ಲಿ ನವ ವಸಾಹತುಶಾಹಿಯನ್ನು ಜಾರಿಗೆ ತರುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ. IMF, World Bank, ಮತ್ತು WTO ಗಳೊಂದಿಗಿನ ಕರಾರು ಒಪ್ಪಂದಗಳು ಕೊನೆಯಾಗಲಿ.

ಸಮಸಮಾಜಕ್ಕಾಗಿ : ಈ ಎಲ್ಲ ಗುರಿಗಳ ಸಾಧನೆ ದುಡಿಯುವ ವರ್ಗ ಅಧಿಕಾರಕ್ಕೆ ಬಂದಾಗ ಮಾತ್ರ ಸಾಧ್ಯ ಮತ್ತು ಶಾಶ್ವತ. ಭಾರತ ವಿವಿಧ ರಾಷ್ಟ್ರೀಯತೆಗಳ ಬಂದೀಖಾನೆ. ಎಲ್ಲ ರಾಷ್ಟ್ರೀಯತೆಗಳಿಗೂ ಆತ್ಮನಿರ್ಣಯದ ಬೇಷರತ್ತಾದ ಹಕ್ಕು ಇರಲೇಬೇಕು. ಕಾರ್ಮಿಕ–ರೈತ ಸರ್ಕಾರ ಮಾತ್ರ ಕೋಮು ಸೌಹಾರ್ದತೆ ಸಾಧಿಸಬಲ್ಲದು. ಇಡೀ ಉಪಖಂಡದಲ್ಲಿ ಸ್ವಯಂ ಪ್ರೇರಿತ ಸಮಾಜವಾದಿ ಒಕ್ಕೂಟದ ನಿರ್ಮಾಣ ಮಾಡಬಲ್ಲದು. ಬಂಡವಾಳವಾದದೊಂದಿಗೆ, ಯಾವುದೇ ರಾಜಿಮಾಡಿಕೊಳ್ಳದ ಒಂದು ಬೃಹತ್ ಕಾರ್ಮಿಕ ಪಕ್ಷದ ನಿರ್ಮಾಣವೇ ನವ ಸಮಾಜವಾದಿ ಪರ್ಯಾಯದ ಗುರಿ.

## ವಿದ್ಯಾರ್ಥಿ –ಯುವಜನರೇ ಹೋರಾಟಕ್ಕೆ ಮುಂದಾಗಿ

# ಸಂಘಪರಿವಾರದ ಕುತಂತ್ರಗಳಿಗೆ ಧಿಕ್ಕಾರ!

20 ತಿಂಗಳ ಹಿಂದೆ ಮೇ2014ರಲ್ಲಿ ಈ ದೇಶಕ್ಕೆ ಮೋದಿ ರಾಜ್ಯಭಾರ ಕಾಲಿಟ್ಟಿತು. ಬಹುತೇಕ ಸಾಮಾಜಿಕ–ರಾಜಕೀಯ ಬುದ್ದಿಜೀವಿಗಳು ಈ ಬದಲಾವಣೆ ಹೊಂದಿದ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ. ಆದರೆ ಸಮಾಜದಲ್ಲಿ ತುಳಿತಕ್ಕೊಳಗಾದ ಜನಾಂಗಗಳು ಮತ್ತು ಬೆರಳೆಣಿಸುವಷ್ಟು ಸಂಸ್ಥೆ–ಸಂಘಟನೆಗಳು ಮತ್ತು ಎಡ ರಾಜಕೀಯ ಪಕ್ಷ–ವ್ಯಕ್ತಿಗಳು, ದೇಶದಲ್ಲಿ ಅಮೂಲಾಗ್ರವಾಗಿ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆಡಳಿತ ರಂಗಗಳಲ್ಲಿ ಪ್ರತಿಗಾಮಿ ಪದ್ಧತಿಗಳು ಜಾರಿಗೆ ಬರುತ್ತಿದ್ದು ಮತ್ತು ಹೆಚ್ಚುತ್ತಿರುವ ಕೋಮುದಳ್ಳುರಿ ಹಾಗೂ ಮೇಲ್‌ಜಾತಿವಾದದ ಪಿಡುಗುಗಳನ್ನು ಧಿಕ್ಕರಿಸುತ್ತಿದ್ದಾರೆ.

**ಈ ಸಂದರ್ಭದಲ್ಲಿ ಪ್ರಗತಿಪರ, ಎಡಚಿಂತನೆಯ ಎಲ್ಲಾ ವ್ಯಕ್ತಿ–ಸಂಘಟನೆಗಳ ಮೇಲೆ ಒಂದಲ್ಲಾ ಒಂದು ರೀತಿಯ ಪ್ರತ್ಯಕ್ಷ ಹಾಗೂ ಪರೋಕ್ಷ ಧಾಳಿ ಮತ್ತು ಅವಹೇಳನಗಳು ಹೆಚ್ಚುತ್ತಿವೆ. ಈ ಸಂದರ್ಭದಲ್ಲಿ ಮೋದಿ–ಆರ್‌ಎಸ್‌ಎಸ್ ನೇತೃತ್ವದ ಆಡಳಿತದಲ್ಲಿ (ಅದೇಷ್ಟೇ ಪ್ರಜಾತಾಂತ್ರಿಕ ಮೆರುಗು ಅದಕ್ಕಿದ್ದರೂ) ಆದ ಜನವಿರೋಧಿ ಬದಲಾವಣೆಗಳ ಸಂಕೀರ್ಣ ಪ್ರಕ್ರಿಯೆಯನ್ನು ರಾಜಕೀಯ, ಸಮಾಜವಾದಿ ಮತ್ತು ಸಕ್ರಿಯ ಕಾರ್ಯಕರ್ತರು ವಿಶ್ಲೇಷಿಸಿ ಅರ್ಥಮಾಡಿಕೊಳ್ಳಬೇಕಾಗಿದೆ ಮತ್ತು ಒಂದು ವಿಶಾಲ ಜನಸಮುದಾಯಗಳ ವೇದಿಕೆಯಡಿ ಕೇಸರೀಕರಣದ ಕುತಂತ್ರವನ್ನು ಬಯಲಿಗೆಳೆದು ಹೋರಾಟ ಮಾಡಬೇಕಿದೆ.**

ಇಡಿ ಸಮಾಜದಲ್ಲಿ, ನಮ್ಮ ಸುತ್ತ–ಮುತ್ತ ಪ್ರತಿ ಇಂಚು, ಎಡೆ ಎಡೆಯಲ್ಲೂ, ಅನ್ಯಾಯದ ಮತ್ತು ಸಾಮಾಜಿಕ ಹಾಗೂ ಆರ್ಥಿಕ ತಾರತಮ್ಯಗಳ ವಿರುದ್ಧ ತಲೆಯೆತ್ತುವ ಎಲ್ಲಾ ಪ್ರಗತಿಪರತೆಯನ್ನು ಮತ್ತು ನಿಲುವುಗಳನ್ನು ಇಂದು ತುಚ್ಛೀಕರಿಸಲಾಗುತ್ತಿದೆ, ಅದಲ್ಲದೆ ಎಲ್ಲಾ ವಿರೋಧವನ್ನು ಬಾಯಿ ಮುಚ್ಚಿಸಿಯೋ ಇಲ್ಲವೇ ರಾಜ್ಯಯಂತ್ರವನ್ನು ಬಳಸಿ ನಿಷೇಧಿಸಲಾಗುತ್ತಿದೆ.

**ಈ ದೇಶದ ಕರಾಳ ಶಕ್ತಿಗಳು ಕೋಮುವಾದಿ ಮತ್ತು ಜಾತಿವಾದಿ ಪೂರ್ವಾಗ್ರಹಗಳ ದಳ್ಳುರಿಯನ್ನು ಬಳಸಿ ಕೇಂದ್ರದ ಅಧಿಕಾರ ಗದ್ದುಗೆಯನ್ನು ಕುತಂತ್ರದಿಂದ ಸೆರೆಹಿಡಿದಿದ್ದಾರೆ. ಈಗ ದಿನಂಪ್ರತಿ ಮಿತಿಮೀರಿದ ವೇಗದಲ್ಲಿ ತಮ್ಮ ಕಪಿಮುಷ್ಠಿಯನ್ನು ಇಡೀ ಸಮಾಜದ ಮೇಲೆ ಬಿಗಿಗೊಳಿಸುತ್ತಿದ್ದಾರೆ. ಸಂಘಪರಿವಾರವೆಂದು ಸಂಬೋಧಿಸಲಾಗುವ ಆರ್‌ಎಸ್‌ಎಸ್ ಕೃಪಾಪೋಷಿತ, ಹಿಂದುತ್ವ ಕೋಮುವಾದಿ ಶಕ್ತಿಗಳು, ಬಂಡವಾಳಿ ಪ್ರಜಾತಂತ್ರದ ಓರೆಕೋರೆಗಳನ್ನೆಲ್ಲ ಬಳಸಿ ದಿನದಿಂದ ದಿನಕ್ಕೆ, ವಾರದಿಂದ ವಾರಕ್ಕೆ, ವರುಷದಿಂದ ವರುಷಕ್ಕೆ ಬಲಿಷ್ಠವಾಗಿ ಬೆಳೆಯುತ್ತಲೇ ಬಂದಿದೆ.**

ತಮಿಳುನಾಡಿನ ಚೆನ್ನೈನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯ ಮೇಲ್ ಜಾತಿ ಮತ್ತು ಬಲಿಷ್ಠ ವರ್ಗಗಳ ಅಧಿಕಾರಿ ವರ್ಗ, ಅಲ್ಲಿನ ವಿದ್ಯಾರ್ಥಿ ಸಂಘಟಿತ 'ಅಂಬೇಡ್ಕರ್–ಪೆರಿಯಾರ್ ಅಧ್ಯಯನ ಕೇಂದ್ರ'ವನ್ನು(ಎಪಿಎಸ್‌ಸಿ) ಆ ಸಂಸ್ಥೆಯಲ್ಲಿ ತುಂಬಿರುವ ಬ್ರಾಹ್ಮಣೀಯ ಶಕ್ತಿಗಳ ಅಪೇಕ್ಷೆಯ ಮೇರೆಗೆ ನಿಷೇಧಿಸಿದ್ದಾರೆ. ಎಪಿಎಸ್‌ಸಿ ಪ್ರತಿಪಾದಿಸುವ ಜಾತಿ ಪದ್ಧತಿ ವಿರೋಧಿ ನಿಲುವು, ಹಿಂದಿ ಭಾಷಾ ಹೇರಿಕೆಗೆ ವಿರೋಧ ಮತ್ತು ಗೋ ಮಾಂಸ ನಿಷೇಧದ ವಿರುದ್ಧ ಪ್ರತಿಭಟನೆ ಈ ಬಲಪಂಥೀಯ ಶಕ್ತಿಗಳಿಗೆ ಸವಾಲೆಸದಿದ್ದವು. ಜಾತಿ ಪದ್ಧತಿಯ, ತಾರತಮ್ಯಗಳನ್ನು ವಿರೋಧಿಸಿ ವೈಚಾರಿಕತೆಯ ಆಂದೋಲನವನ್ನು ನಡೆಸುತ್ತಿದ್ದ 'ಅಂಬೇಡ್ಕರ್–ಪೆರಿಯಾರ್ ಅಧ್ಯಯನ ಕೇಂದ್ರ'ವನ್ನು ಈ ಕಟ್ಟರ್ ಹಿಂದುತ್ವವಾದಿಗಳು ತಮ್ಮ "ಮಹಾನ್ ಸಂಸ್ಕೃತಿ–ಧರ್ಮ"ಕ್ಕೆ ಧಕ್ಕೆ ಎಂಬಂತೆ ಕಂಡಿದ್ದಾರೆ.

ಪುಣೆಯ ಚಲನಚಿತ್ರ ತರಬೇತಿ ಸಂಸ್ಥೆಯ(ಎಫ್‌ಟಿಐಐ) ನೇತೃತ್ವವನ್ನು ಬದಲಾಯಿಸಿ ಹಿಂದೂ ಮತಾಂಧತೆಯನ್ನು ಪ್ರತಿಪಾದಿಸುವ ಮತ್ತು ಅತ್ಯಂತ ಕೀಳು ಮಟ್ಟದ ಚಲನಚಿತ್ರಗಳಲ್ಲಿ ನಟಿಸಿ ಚಿತ್ರನಟನಾಗಿರುವ ಗಜೇಂದ್ರ ಚೌಹಣ್‌ನನ್ನು ಸಂಸ್ಥೆಯ ಮುಖ್ಯಸ್ಥನನ್ನಾಗಿ ನೇಮಿಸಿರುವುದೂ ಸಹ ಸಾಂಸ್ಕೃತಿಕ ಮಟ್ಟದಲ್ಲಿ ಸಮೂಹ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳನ್ನು ಕಬಳಿಸುವುದೇ ಆಗಿದೆ. ಎಫ್‌ಟಿಐಐ ವಿದ್ಯಾರ್ಥಿಗಳು ಈ ಕೇಸರೀಕರಣದ ವಿರುದ್ಧ ಸಿಡಿದೆದ್ದು ಅದನ್ನು ಇಂದಿಗೂ ವಿರೋಧಿಸುತ್ತಿದ್ದಾರೆ. ಅವರ ಹೋರಾಟವನ್ನು ದಮನ ಮಾಡಿ, ವಿದ್ಯಾರ್ಥಿಗಳೆಲ್ಲರನ್ನು "ನಕ್ಸಲ್" ಎಂದು ಹೆಸರಿಸಿ ರಾಜದ್ರೋಹದ ಆರೋಪವನ್ನು ಮಾಡಿರುವುದು ಈ ಸರ್ಕಾರದ ಸರ್ವಾಧಿಕಾರಿ ಮನೋಭಾವವನ್ನು ಬಯಲಿಗಿಟ್ಟಿದೆ.

**ಯುಜಿಸಿ ಶಿಕ್ಷಣ ವೇತನನ್ನು ಕಡಿತಗೊಳಿಸುವ ಹುನ್ನಾರದಿಂದ ಆ ಅನುದಾನಕ್ಕೆ ಲಗ್ಗೆಯಿಟ್ಟು ವಿದ್ಯಾರ್ಥಿಗಳನ್ನು ಅಂಕೆಯಲ್ಲಿಡುವ ಮತ್ತೊಂದು ಪ್ರಯತ್ನ ಕೂಡ ಬಿಜೆಪಿ ಸರ್ಕಾರದ ಜನವಿರೋಧಿ ಕ್ರಮವೇ. ಇದಲ್ಲದೆ ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ 5 ಜನ ದಲಿತ ಸ್ನಾತಕೋತ್ತರ ವಿದ್ಯಾರ್ಥಿಗಳ ಮೇಲೆ ದೇಶದ್ರೋಹದ ಆರೋಪ ಮಾಡಿ, ಅವರನ್ನು ವಸತಿ ನಿಲಯದಿಂದ ಹೊರ ಹಾಕಿ ಅಸ್ಪೃಶ್ಯತೆ–ಜಾತೀಯತೆಯ ಕೆಟ್ಟ ಸಂಪ್ರದಾಯವನ್ನು ಅಲ್ಲಿನ ವರಿಷ್ಠರು ಜಾರಿಗೆ ತಂದಿದ್ದಾರೆ. ಈ ಬರವಣಿಗೆ ಪ್ರಕಟಣೆಗೊಳ್ಳುವ ಹೊತ್ತಿಗೆ ದಲಿತ ಯುವ ವಿದಾರ್ಥಿ–ನಾಯಕ ರೋಹಿತ್ ವೆಮುಲಾರವರನ್ನು ಈ ದೇಶದ ಸವರ್ಣೀಯ, ಕೋಮುವಾದಿ ವ್ಯವಸ್ಥೆ ಬಲಿತೆಗೆದುಕೊಂಡಿತ್ತು. ಇದರಿಂದಾಗಿ ಇಡೀ ವಿದ್ಯಾರ್ಥಿ ಸಮುದಾಯ ವ್ಯಗ್ರಗೊಂಡು ಹೋರಾಟದ ಹಾದಿ ತುಳಿಯುವಂತೆ ಮಾಡಿದೆ.**

# ಚೆ' ಗುವೇರ ಯಾರು? ಈತನ ನಿಲುವುಗಳೇನು ?

**"ಪ್ರತಿಯೊಂದು ಅನ್ಯಾಯ–ದಬ್ಬಾಳಿಕೆಗಳು ನಿನ್ನನ್ನು ರೋಷದಿಂದ ಕಂಪಿಸುವಂತೆ ಮಾಡಿದರೆ, ನೀನು ನನ್ನ ಒಡನಾಡಿಯೇ ಹೌದು"**



ಜಗತ್ತಿನಾದ್ಯಂತ ಈತ 'ಚೆ' ಎಂದೇ ಪ್ರಸಿದ್ಧ. ಈ ಸಂಭೋದನೆಯನ್ನು ಚೆ ನ ಮೆಕ್ಸಿಕೋ ಗೆಳೆಯರು ಹಾಗು ಹೋರಾಟದೊಡನಾಡಿಗಳು 1950ರಲ್ಲಿ ಕೊಟ್ಟಿದ್ದು. ಚೆ'ನ ಹುಟ್ಟುನಾಡಾದ ಅರ್ಜೆಂಟೈನಾದಲ್ಲಿ ಈ ಹೆಸರು ಸಾಮಾನ್ಯ. 1997ರ ನಂತರದ ದಿವಸಗಳಲ್ಲಿ ಪ್ರಪಂಚದಾದ್ಯಂತ ಯುವಜನತೆ ಚೆ' ಗುವೇರನ ಟೀ–ಶರ್ಟ್ ಹಾಗೂ ಅವನ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಜನಪ್ರಿಯವಾಗಿಸಿದ್ದಾರೆ. ನಿಸ್ಸಂದೇಹವಾಗಿ ಚೆ ಗುವೇರನಿಗೆ ಸಾಹಸಿ ವರ್ಚಸ್ಸು ಮತ್ತು "ಬಂಡಾಯಗಾರ"ನೆಂಬ ಆಕರ್ಷಕ ಬಿಂಬವಿದೆ.

ಲಾಭಕೋರ ಬಂಡವಾಳಿ ವ್ಯವಸ್ಥೆ, ಚೆ'ನ ಈ ವರ್ಚಸ್ಸಿನ ಪ್ರಯೋಜನ ಮಾಡಿಕೊಂಡು, ಅವನನ್ನೆ ಒಂದು ಮಾರಾಟದ ವಸ್ತುವನ್ನಾಗಿಸಿದೆ. ನಿಜ ಹೇಳುವುದಾದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಚೆ' ವರ್ಚಸ್ಸಿನ ಸುತ್ತ ಹೆಣೆದ ಒಂದು ದೊಡ್ಡ ಉದ್ಯಮವೇ ಇದೆ.

**ಚೆ' – ಹೋರಾಟ ಮತ್ತು ತ್ಯಾಗಗಳ ಪ್ರತೀಕ**

ಚೇ' ಗುವೇರನ ಬಗ್ಗೆ ಯುವಜನತೆ ಒಲವು ತೋರಲು ಇನ್ನೊಂದು ಮುಖ್ಯ ಕಾರಣ ಬಂಡವಾಳಿ ಶೋಷಣೆ ಹಾಗೂ ಸಾಮ್ರಾಜ್ಯವಾದದ ವಿರುದ್ಧ ಆತ ನಡೆಸಿದ ನಿರಂತರ ಹೋರಾಟ, ಬದಲಾವಣೆಯನ್ನು ಬಯಸುವ ಪ್ರತಿಯೊಬ್ಬರಿಗೂ ಆತ ಒಬ್ಬ ಅಪ್ರತಿಮ ಮಾದರಿ. ಇಂದಿನ ಶೋಷಕ ಬಂಡವಾಳಿ ವ್ಯವಸ್ಥೆಯ ವಿರುದ್ಧ ಒಂದು ಪರ್ಯಾಯ ಹುಡುಕ ಹೊರಡುವ ಪ್ರತಿ ಯುವಕರಿಗೂ ಆತನ ಜೀವನ ಹಾಗು ಹೋರಾಟ ಆದರ್ಶ ಪ್ರಾಯವೇ ಹೌದು. ಚೇ'ಗುವೇರಾನನ್ನು ಕೇವಲ ವಿಜೃಂಭಣೆಯ ಸರಕಾಗಿಸದೇ, ಬಂಡವಾಳಿವಾದ ಮತ್ತು ಸಾಮ್ರಾಜ್ಯವಾದಗಳ ವಿರುದ್ಧ ನಡೆಸಿದ ಅವನ ಧೀರೋದಾತ್ತ ಹೋರಾಟ ಮತ್ತು ತ್ಯಾಗಶಾಲಿ ಜೀವನ ಮಾದರಿಗಳನ್ನು ನೆನಪು ಮಾಡಿಕೊಂಡು ಅಳವಡಿಸಿಕೊಳ್ಳುವುದು ಸೂಕ್ತ ಹಾಗು ಅವಶ್ಯಕ ಕೂಡ.

ಬಂಡವಾಳಿ ಶೋಷಣೆಯ ವಿರುದ್ಧ ಅವಿರತವಾಗಿ ಹೋರಾಡಿದ ಚೆ'ನಿಗೆ, ಸಮಾಜವಾದದತ್ತ ಒಲವು ಬಂದದ್ದು ಅವನ ಸ್ವಂತ ಅನುಭವಗಳಿಂದ. ಚೆ' ಸಮಾಜವಾದದ ಅಂತರರಾಷ್ಟ್ರೀಯತೆಯ ಅನಿವಾರ್ಯತೆಯನ್ನು ಮನಗಂಡು ತತ್ವಶಃ ಮತ್ತು ಪ್ರತ್ಯಕ್ಷವಾಗಿ ದುಡಿದ ಒಬ್ಬ ಚೇತನಾ ಕ್ರಾಂತಿಕಾರಿ.

"ಸಮಾಜವಾದ ಮತ್ತು ನವ ಮಾನವ" ಎಂಬ ವಿಚಾರಧಾರೆಯ ಮೂಲಕ, ಕ್ರಾಂತಿಯ ನಂತರದ ಆರ್ಥಿಕ ವ್ಯವಸ್ಥೆ ಹೇಗಿರಬೇಕೆಂದು ಸ್ಪಷ್ಟ ಕಲ್ಪನೆ ಹೊಂದಿದ್ದವನು ಚೆ. ಈ ವಿಚಾರಗಳನ್ನು ಕ್ಯೂಬಾ ದೇಶದಲ್ಲಿ 1959ರಲ್ಲಿ ಕ್ರಾಂತಿಯ ನಂತರ ಆಳವಡಿಸಲು ಪ್ರಯತ್ನಿಸಿದ ಕಾರ್ಯಶೀಲ.

ಮೊದಲಿಗೆ ಅಂದಿನ ಯುಎಸ್‌ಎಸ್‌ಆರ್ ಪೂರ್ವ ಯುರೋಪ್ ದೇಶಗಳನ್ನು ಸಮಾಜವಾದಿ ಎಂದು "ದೂರದಿಂದ" ಗುರುತಿಸಿದ್ದ ಚೆ'. ತದನಂತರ ಅಲ್ಲಿದ್ದ ಅಧಿಕಾರಶಾಹಿ ರಾಜ್ಯಾಡಳಿತವನ್ನು ಕಣ್ಣಾರೆ ಕಂಡು ರೋಸಿ ಹೋಗಿದ್ದ ಮತ್ತು ಸ್ಪಷ್ಟವಾದ ಕಡುಟೀಕೆ ಪ್ರತಿಕ್ರಿಯೆಗಳನ್ನು ನೀಡಿದ್ದ.

**"ಚೆ' ವೀವ" – ಚೆ ಚಿರಾಯು!**

ಇಪ್ಪತ್ತರ ವಯಸ್ಸಿನ ಆಸುಪಾಸಿನಲ್ಲೇ ಕ್ರಾಂತಿಗೆ ತನ್ನನ್ನು ಮುಡುಪಾಗಿಸಿಕೊಂಡ ಚೆ'ನನ್ನು 39 ರ ವಯಸ್ಸಿನ ಹೊತ್ತಿಗೆ ಅವನ ಅಂತರರಾಷ್ಟ್ರೀಯ ಹೋರಾಟ ಬಲಿ ತೆಗೆದುಕೊಂಡಿತ್ತು. ಜೀವನುದುದ್ದಕ್ಕೂ ಚೆ' ಯಾವುದೇ ಆಮಿಷ, ಪ್ರಲೋಭನೆಗಳಿಗೆ ಒಳಗಾಗದೆ ಸಾಮಾನ್ಯನಂತೆ ಜೀವಿಸಿದ ಅಂತರರಾಷ್ಟ್ರೀಯವಾದಿ. ಈ ಆದರ್ಶಪ್ರಾಯ ಜೀವನ ಶೈಲಿಯಿಂದಾಗಿಯೇ ಇಂದೂ ಕೂಡ ಚೆ' ಶೋಷಣೆ ಮತ್ತು ದಬ್ಬಾಳಿಕೆಗಳ ವಿರುದ್ಧ ನಡೆಯುವ ಹೋರಾಟಗಳಿಗೆ ಸ್ಫೂರ್ತಿ.

ಚೆ' ನನ್ನು ಕೊಂದದ್ದು ಜಗತ್ತಿನ ಬಂಡವಾಳಿ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಶಕ್ತಿಗಳು. ಆದರೆ ಇಂದಿಗೂ ಚೆ' ದಬ್ಬಾಳಿಕೆಯ ವಿರುದ್ಧ ಹೋರಾಟದ ಅಂತರರಾಷ್ಟ್ರೀಯ ಪ್ರತೀಕ. ಇಂದಿಗೂ ಲ್ಯಾಟಿನ್ ಅಮೇರಿಕಾದ ಉದ್ದಗಲಕ್ಕೂ ಯುವಜನ ವೈವಿಧ್ಯ ಪೂರ್ಣ ಗೋಡೆ ಬರಹಗಳ ಮೂಲಕ ಚೆ'ನನ್ನು ಜೀವಂತವಿರಿಸಿದ್ದಾರೆ. "ಚೆ'–ವೀವ" ಚೆ' ಚಿರಾಯು!

ಜಗತ್ತಿನ ಎಲ್ಲಾ ದೇಶಗಳ ಸಮಾಜವಾದಿ ಹೋರಾಟಗಾರರು, ಚೆ'ನ ವಿಚಾರ, ಹಾಗು ಅವನ ಜೀವನದ ಅನುಭವದ ಪಾಠಗಳನ್ನು ಸಮಾಜವಾದದ ಸಾಕಾರಕ್ಕಾಗಿ ಅಭ್ಯಾಸ ಮಾಡಿ ಹೋರಾಟಗಳಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.


## Socialist Alternative Books







**Marxism in Today's World (Hindi Translation)**

The Indian edition of MARXISM IN TODAY'S WORLD is out now Rs. 150/-




**Socialism Today,** a monthly Magazine published by the British Section of the CWI

**For copies Contact:**
**New Socialist Alternative**
**Phone 080 2674 2616 / 9448394365**
**Write to :**
**newsocialist.in@gmail.com**

# ಲಿಯಾನ್ ಟ್ರಾಟ್ಸ್ಕಿ

# ನಿರಂತರ ಸಮಾಜವಾದಿ ಕ್ರಾಂತಿಯ ಪರಂಪರೆ

**1940ರ ಆಗಸ್ಟ್ 20ರಂದು, ಎಪ್ಪತ್ತೈದು ವರುಷಗಳ ಹಿಂದೆ, ಸೋವಿಯತ್ ಒಕ್ಕೂಟದ ಸ್ಟಾಲಿನ್‌ನ ಗುಪ್ತಚರದಳ; ಜಿ.ಪಿ.ಯು.ವಿನ ಕೊಲೆಪಾತಕಿ ರೆಮಾಂಡ್ ಮರ್ಕೆಡಾರ್, 1917ರ ಕ್ರಾಂತಿಯ ಮೇಧಾವಿ ಕ್ರಾಂತಿಕಾರಿಗಳಲ್ಲಿ ಒಬ್ಬರಾದ ಲಿಯಾನ್ ಟ್ರಾಟ್ಸ್ಕಿಯವರ ತಲೆಗೆ ಮಂಜುಗಡ್ಡೆ ಕೆದಕುವ ಕೈಗುದ್ದಲಿಯ ಪ್ರಹಾರ ನಡೆಸಿದ. ಅಂದಿನ ಅಧಿಕಾರಶಾಹಿ ಸ್ಟಾಲಿನ್‌ವಾದದ ಅತ್ಯಂತ ತೀಕ್ಷ್ಣ ಟೀಕಾಕಾರ, ವಿಮರ್ಶಕ ಮತ್ತು ಪ್ರಧಾನ ಮಾರ್ಕ್ಸ್‌ವಾದಿ ಚಿಂತಕ, ಮಹಾನ್ ಕ್ರಾಂತಿಕಾರಿ ಲಿಯಾನ್ ಟ್ರಾಟ್ಸ್ಕಿ, ಮರುದಿನ ಆಗಸ್ಟ್ 21ರಂದು ಕೊನೆಯುಸಿರೆಳೆಯ ಬೇಕಾಯಿತು.**

ಟ್ರಾಟ್ಸ್ಕಿಯ ಹೆಸರು ಭಾರತದ ಮಟ್ಟಿಗೆ ಬಹುಜನರಿಗೆ ಅಪರಿಚಿತ. ಕಮ್ಯೂನಿಸ್ಟ್ ಪಕ್ಷಗಳ ಕಾರ್ಯಕರ್ತರಿಗೆ ಹಾಗು ಎಡ ವಿಚಾರಧಾರೆಯತ್ತ ಒಲವಿರುವ ಬುದ್ಧಿಜೀವಿಗಳಿಗೆ, ಟ್ರಾಟ್ಸ್ಕಿಯ ಹೆಸರು ಅಕ್ಟೋಬರ್ ಕ್ರಾಂತಿಯ ಸಮಯದ ಖಳನಾಯಕನಾಗಿಯೋ, ಬೊಲ್ಶೆವಿಕ್ ನಾಯಕ ಲೆನಿನ್‌ರ ವೈರಿಯೆಂದೋ ಮತ್ತು ಸಮಾಜವಾದದ ಶತ್ರುವೆಂದೋ ಪರಿಚಯಿಸಲಾಗಿದೆ. ಸ್ಟಾಲಿನ್ ಹಾಗು ಅವನ ಅನುಯಾಯಿಗಳು, ಚರಿತ್ರೆ ಹಾಗು ಸತ್ಯತೆಗಳನ್ನು ತಿರುಚುವ ವಿಷಯದಲ್ಲಿ ಅಪ್ರತಿಮ ನೈಪುಣ್ಯತೆಯನ್ನು ಸಾಧಿಸಿದವರು.

ಸೋವಿಯತ್ ಪ್ರಕಟಣೆಯ ಲೆನಿನ್‌ರ ಬರಹ ಸಂಗ್ರಹದಲ್ಲಿ, ವ್ಯಕ್ತಿ–ವಿಚಾರ–ಪರಿಚಯ ವಿಭಾಗದಲ್ಲಿ ಟ್ರಾಟ್ಸ್ಕಿಯನ್ನು ಒಬ್ಬ ಪ್ರತಿಕ್ರಾಂತಿಕಾರಿಯೆಂದೇ ಬಿಂಬಿಸಲಾಗಿದೆ. ಸ್ಟಾಲಿನ್‌ರ ಕಾಲದಲ್ಲೂ, ಟ್ರಾಟ್ಸ್ಕಿಯನ್ನು ಲೆನಿನ್‌ರ ಪರಮ ವೈರಿಯೆಂದು, ಆಪಾದಿಸಿ ಜನದ್ರೋಹಿಯೆಂಬ ಪಟ್ಟಕಟ್ಟಿ ಗಡಿಪಾರು ಮಾಡಲಾಯಿತು. ಅವರ ವಿಚಾರಗಳತ್ತ ಜನ ಎಲ್ಲಿ ಇಣುಕಿ ನೋಡುತ್ತಾರೋ ಎಂಬ ಭಯದಿಂದ ಅವರ ಬರವಣಿಗೆ ಹಾಗೂ ಪುಸ್ತಕಗಳನ್ನೆಲ್ಲವನ್ನು ಕಾನೂನು ಬಾಹಿರವೆಂದು ಘೋಷಿಸಲಾಯಿತು. ಟ್ರಾಟ್ಸ್ಕಿಯವರ ಹಿತೈಷಿಗಳ ಹಾಗೂ ಅವರ ಪರವಾದ ಧೋರಣೆ ಹೊಂದಿದ್ದ ಸಹಸ್ರಾರು ಅನುಯಾಯಿಗಳನ್ನು ಜೈಲಿಗೆ ತಳ್ಳಿ ಕೊಲ್ಲಿಸಲಾಯಿತು. ಪುರಾತನ ಪತ್ರದಾಖಲೆ ಸಂಗ್ರಹಾಲಯಗಳಲ್ಲಿ ಟ್ರಾಟ್ಸ್ಕಿ ಲೆನಿನ್‌ರ ಜೊತೆಗಿದ್ದ ಎಲ್ಲ ಚಿತ್ರಗಳನ್ನೂ ತಿದ್ದುಪಡಿ ಮಾಡಲಾಯಿತು. ಟ್ರಾಟ್ಸ್ಕಿ ಮತ್ತು ಲೆನಿನ್‌ರ ನಡುವೆ ನಡೆದ ಅಸಂಖ್ಯಾತ ಪತ್ರ ವ್ಯವಹಾರ, ವಿಷಯ ಭಿನ್ನಾಭಿಪ್ರಾಯಗಳನ್ನು ಅಸಾಂದರ್ಭಿಕವಾಗಿ ಬಳಸಿ, ಭವಿಷ್ಯದ ಸಮಾಜವಾದಿಗಳಿಗೆ, ಯುವಕರಿಗೆ, ಟಾಟ್ಸ್ಕಿ ಎಂಬ ಹೆಸರು ಒಬ್ಬ ಪಾತಕಿಯದೇನೋ ಎಂಬಂತೆ ವಿಧಿವತ್ತಾಗಿ ಚಿತ್ರಿಸಲಾಗಿದೆ.

ಕರ್ನಾಟಕ ಹಾಗು ಭಾರತದ ಸಮಾಜವಾದಿ ಹುರಿಯಾಳುಗಳಿಗೆ, ಸ್ಟಾಲಿನ್‌ವಾದಿ, ಮಾವೋವಾದಿ ಕಮ್ಯುನಿಸ್ಟ್ ಪಕ್ಷಗಳಾದ ಸಿ.ಪಿ.ಐ, ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ(ಎಂ.ಎಲ್)ಗಳಲ್ಲಿರುವ ಸಕ್ರಿಯ ಕಾರ್ಯಕರ್ತರುಗಳಿಗೆ ಮತ್ತು ಹೋರಾಟಗಾರರಿಗೆ, ಲಿಯಾನ್ ಟ್ರಾಟ್ಸ್ಕಿಯವರ ಬಗ್ಗೆ ಇರುವ ಪೂರ್ವಾಗ್ರಹಗಳನ್ನು ದೂರ ಮಾಡುವ ಉದ್ದೇಶದಿಂದ ಕ್ರಾಂತಿಕಾರಿ ಲಿಯಾನ್ ಟ್ರಾಟ್ಸ್ಕಿಯ ಸತ್ಯ–ವಾಸ್ತವ ಚಿತ್ರಣವನ್ನು ಮಾಡಿಸುವ ಉದ್ದೇಶದಿಂದ, ಅವರ 75ನೇಯ ವಾರ್ಷಿಕ ಸ್ಮಾರಕೋತ್ಸವದ ಆಚರಣೆಯ ಸಂದರ್ಭದಲ್ಲಿ ಟ್ರಾಟ್ಸ್ಕಿವಾದದ ಅನುಯಾಯಿ ಸಂಘಟನೆಯಾದ **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'**(ನವ ಸಮಾಜವಾದಿ ಪರ್ಯಾಯ)ದ ಹಾಗು 'ದುಡಿಯೋರ ಹೋರಾಟ' ಪತ್ರಿಕೆ ಈ ವ್ಯಕ್ತಿ ಪರಿಚಯ ಲೇಖನವನ್ನು ಪ್ರಕಟಿಸಿದೆ.

ಟ್ರಾಟ್ಸ್ಕಿಯ 75ನೇ ಸ್ಮಾರಕೋತ್ಸವದ ಈ ಸಂದರ್ಭದಲ್ಲಿ ಅವರ ವಿಚಾರಗಳ ಮತ್ತು ಜೀವನದ ಕೆಲವು ಪ್ರಮುಖ ಸಾಧನೆಗಳನ್ನು ಮೆಲುಕು ಹಾಕಿ ಸಮಕಾಲೀನ ಸಮಾಜವಾದಿ ಹೋರಾಟದ ದಾರಿಗಳನ್ನು ಹುಡುಕುವುದೇ, ಇಂದಿನ ಕ್ರಾಂತಿಕಾರಿ ಸಮಾಜವಾದಿಗಳು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ.

1940ರ ಆಗಸ್ಟ್ 21ರ ಟ್ರಾಟ್ಸ್ಕಿಯ ಮರಣಕ್ಕೆ ಕಾರಣನಾದ ಸ್ಟಾಲಿನ್‌ರ ಬಾಡಿಗೆ ಗೂಂಡಾ ರೆಮಾಂಡ್ ಮರ್ಕೆಡಾರ್‌ನ ಕೈಗುದ್ದಲಿ ಕೇವಲ ಸಾಧಾರಣ ಮೆದುಳೊಂದನ್ನು ಸಿಗಿದಿರಲಿಲ್ಲ. ಬದಲಾಗಿ, ಅಂದಿನ ಸಂದರ್ಭದಲ್ಲಿ ಅಂತರರಾಷ್ಟ್ರೀಯವಾಗಿ ಇಡೀ ಕಾರ್ಮಿಕ ವರ್ಗ ಎದುರಿಸುತ್ತಿದ್ದ ಸಮಸ್ಯೆಗಳನ್ನು ಸಮರ್ಪಕವಾಗಿ ವಿಮರ್ಶಿಸಿ, ಭವಿಷ್ಯಕ್ಕೆ ದಾರಿ ತೋರುತ್ತಿದ್ದ



ಜ್ಞಾನಕೇಂದ್ರವನ್ನೇ ನಿರ್ನಾಮ ಮಾಡಿತ್ತು.

**ಸ್ಟಾಲಿನ್‌ವಾದಿ 'ಅಪಪ್ರಚಾರಗಳು ಕೆಲವು ಕಾಲ ಕೆಲವರನ್ನು ದಾರಿ ತಪ್ಪಿಸಬಹುದು. ಆದರೆ ಸದಾಕಾಲ ಸರ್ವರನ್ನು ದಾರಿ ತಪ್ಪಿಸಲಾಗದು'.**

*"1917ರ ಕ್ರಾಂತಿಯ ಸಂದರ್ಭದಲ್ಲಿ ರಷ್ಯಾದ ಜನರಿಗೆ ಲೆನಿನ್ ಯಾರು? ಟ್ರಾಟ್ಸ್ಕಿ ಯಾರು? ಎಂಬ ವ್ಯತ್ಯಾಸವೇ ತಿಳಿದಿರಲಿಲ್ಲ, ಜ಼ಾರ್ ದೊರೆಯ ಪೊಲೀಸ್‌ರಿಂದ ತಪ್ಪಿಸಿಕೊಳ್ಳಲು ಒಬ್ಬನೇ ವ್ಯಕ್ತಿ ಎರಡು ಹೆಸರನ್ನಿಟ್ಟು ಕೊಂಡಿದ್ದಾನೆ ಎಂಬ ಪ್ರತೀತಿ ಜನರಲ್ಲಿತ್ತು. ಏಕೆಂದರೆ ಟ್ರಾಟ್ಸ್ಕಿ ಮತ್ತು ಲೆನಿನ್‌ರ ವಿಚಾರ ಹಾಗೂ ಕಾರ್ಯತಂತ್ರಗಳಲ್ಲಿ ಆ ರೀತಿಯ ಏಕರೂಪತೆ ಇತ್ತು".* ಸೋವಿಯತ್ ಕ್ರಾಂತಿಯಿಂದ ಪ್ರಭಾವಿತನಾದ ಜಾನ್‌ರೀಡ್ ಎಂಬ ಅಮೇರಿಕನ್ ಪತ್ರಕರ್ತ–ಲೇಖಕ ಈ ರೀತಿಯಾಗಿ ತನ್ನ ಪ್ರಖ್ಯಾತ ಪುಸ್ತಕ **"ಟೆನ್ ಡೇಸ್ ದಟ್ ಶುಕ್ ದಿ ವರ್ಲ್ಡ್"**ನಲ್ಲಿ ಉಲ್ಲೇಖಿಸಿದ್ದಾನೆ.

1917ರ ಅಕ್ಟೋಬರ್ ಕ್ರಾಂತಿಯ ಪೂರ್ವದಲ್ಲಿ ಹಾಗು ಕ್ರಾಂತಿಯ ನಂತರ ಟ್ರಾಟ್ಸ್ಕಿ ವಹಿಸಿದ ಪಾತ್ರ ಹಾಗು ಅವರಿಗೆ ಲೆನಿನ್ ವಹಿಸಿದ ಜವಾಬ್ದಾರಿಗಳನ್ನು ಪಟ್ಟಿ ಮಾಡಿದಲ್ಲಿ ಸ್ಟಾಲಿನ್‌ವಾದಿಗಳ ಹಸಿಸುಳ್ಳುಗಳು ಎಂಥಹ ಹೇಯವಾದದ್ದು ಎಂಬುದನ್ನು ಸಾಬೀತು ಪಡಿಸಬಹುದು.

*** 1905–1906ರ ಮೊದಲನೆಯ ರಷ್ಯನ್ ಕ್ರಾಂತಿಯ ಸಂದರ್ಭದಲ್ಲಿ ಪ್ರಪ್ರಥಮ ಸೋವಿಯತ್‌ನ (ಕಾರ್ಮಿಕವರ್ಗದ ಪ್ರತಿನಿಧಿಗಳ ಸಮಿತಿ) ಸಭಾಧ್ಯಕ್ಷ ಟ್ರಾಟ್ಸ್ಕಿ.**

*** 1917ರಲ್ಲಿ ಮಾನವ ಚರಿತ್ರೆಯಲ್ಲೇ ಮೊದಲನೇ ಬಾರಿ ನಡೆದ ಏಕೈಕ ಮಹಾನ್ ಘಟನೆ ರಷ್ಯನ್ ಕ್ರಾಂತಿಯ ಪ್ರಮುಖ ಸಂಘಟನಾಕಾರರಲೊಬ್ಬ ಟ್ರಾಟ್ಸ್ಕಿ.**

*** ತದನಂತರ ರಷ್ಯನ್ ಕ್ರಾಂತಿಯನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕೆಂಬ ಹುನ್ನಾರ ಮಾಡಿ ದಂಡೆದ್ದು ಬಂದಿದ್ದ 21 ಸಾಮ್ರಾಜ್ಯಶಾಹಿ ದೇಶಗಳ ಪ್ರತಿಕ್ರಾಂತಿಕಾರಿ ಸೇನೆಗಳನ್ನು ಸೋಲಿಸಿದ ಕೆಂಪು ಸೇನೆಯನ್ನು ಕಟ್ಟಿ ಅದರ ನೇತೃತ್ವ ವಹಿಸಿದ ಕ್ರಾಂತಿಕಾರಿ ಟ್ರಾಟ್ಸ್ಕಿ.**

ಇದೆಲ್ಲಕ್ಕಿಂತ ಮಿಗಿಲಾಗಿ, ಲಿಯಾನ್ ಟ್ರಾಟ್ಸ್ಕಿಯು ಕಾರ್ಮಿಕ ಚಳವಳಿಯ ಮಹಾನ್ ಸಿದ್ಧಾಂತಿ. ಕಾರ್ಲ್‌ಮಾರ್ಕ್ಸ್‌ವರನ್ನು ಕಳೆದ ಸಹಸ್ರಮಾನದ ವ್ಯಕ್ತಿ ಎಂದು ಕರೆಯಲಾಗಿದೆ. ಏಂಗೆಲ್ಸ್, ಲೆನಿನ್ ಮತ್ತು ರೋಸಾ ಲುಕ್ಸುಂಬರ್ಗ್ ಸೇರಿದಂತೆ ಲಿಯಾನ್ ಟ್ರಾಟ್ಸ್ಕಿಯೂ ಕೂಡಾ ಕಳೆದ ಶತಮಾನ ಕಂಡ ದುಡಿಯುವ ವರ್ಗದ ಶ್ರೇಷ್ಠರೇ.

ಇಂದು, ಟ್ರಾಟ್ಸ್ಕಿವಾದದ ವಿರೋಧಿಗಳು, ಟ್ರಾಟ್ಸ್ಕಿಯ ವಿಚಾರ ಹಾಗು ಅವರ ಕಾರ್ಯವಿಧಾನಗಳನ್ನು ಕಾರ್ಯ ಸಾಧ್ಯವಲ್ಲವೆಂದೋ ಅಥವಾ ಸಮಕಾಲೀನ ಪರಿಸ್ಥಿತಿಗೆ ಸರಿ ಹೊಂದಲಾರದ್ದೆಂದೋ ಮೂದಲಿಸುತ್ತಾರೆ. ಆದರೆ ಟ್ರಾಟ್ಸ್ಕಿಯ ವಿಚಾರ ಭಂಡಾರದಲ್ಲಡಗಿರುವ ಮಾರ್ಕ್ಸ್‌ವಾದಿ ವಿಮರ್ಶೆ, 21ನೇ ಶತಮಾನದ ಸಮಾಜವಾದಿ ಕ್ರಾಂತಿಕಾರಿಗಳಿಗೆ, ಇಂದಿನ ಸಂಕೀರ್ಣ ಪರಿಸ್ಥಿತಿಗಳನ್ನು ಅರ್ಥೈಸಲು ಬೇಕಾದ ಸಾಧನ ಸಾಮಗ್ರಿಯನ್ನು ಒದಗಿಸುತ್ತದೆ.

**ಟ್ರಾಟ್ಸ್ಕಿಯವರ ವಿಚಾರಗಳು, ಅವರ ದ್ವಂದ್ವಮಾನ ಭೌತಿಕ ವಿಮರ್ಶನ ರೀತಿ ಮತ್ತು ತೀರ್ಮಾನಗಳು ಅವರ ಜೀವನ ಕಾಲದಲ್ಲಿ ಎಷ್ಟು ಪ್ರಸ್ತುತವಾಗಿದ್ದವೋ ಅಷ್ಟೇ ಇಂದಿಗೂ ಕೂಡ ಸಮಯೋಚಿತ. ಟ್ರಾಟ್ಸ್ಕಿಯ ಅತ್ಯಂತ ರೋಮಾಂಚನಕಾರಿ ಬರಹವಾದ "ಹಿಸ್ಟರಿ ಆಫ್ ದಿ ರಷ್ಯನ್ ರೆವಲ್ಯೂಷನ್" ಮಾರ್ಕ್ಸ್‌ವಾದಿ ತತ್ವ ಮತ್ತು ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರುವ ಸಂಕೀರ್ಣತೆಯನ್ನು ಸವಿಸ್ತಾರವಾಗಿ ದಾಖಲಿಸಿರುವ ಮೇರುಕೃತಿ. ಟ್ರಾಟ್ಸ್ಕಿಯ ಈ ಪುಸ್ತಕದ ಶೈಲಿ, ಓದುಗರೇ ಈ ಜಯಶಾಲಿ ಸಮಸಮಾಜ ಕ್ರಾಂತಿಯಲ್ಲಿ ಭಾಗವಹಿಸಿದ್ದರೇನೋ ಎಂಬಂತೆ ಭಾಸವಾಗಿಸುವಷ್ಟು ರೋಚಕವಾಗಿದೆ. ಅದಲ್ಲದೆ ಈ ಪುಸ್ತಕದುದ್ದಕ್ಕೂ ಕಂಡುಬರುವ ಇನ್ನೊಂದು ಬಹುಮುಖ್ಯ ಅಂಶವೆಂದರೆ, ಅಕ್ಟೋಬರ್ 1917ರ ಸಂದರ್ಭದಲ್ಲಿ ಕ್ರಾಂತಿಕಾರಿ ಪಕ್ಷದ ಪಾತ್ರ ಮತ್ತು ಆ ರೀತಿಯ ಪಕ್ಷ, ಕ್ರಾಂತಿಕಾರಿ ಸದಸ್ಯರನ್ನು ಸೈದ್ಧಾಂತಿಕವಾಗಿ ತಯಾರು ಮಾಡಲೇ ಬೇಕಾದ ಪ್ರಮುಖ ಅನಿವಾರ್ಯತೆ ಬಗ್ಗೆ ಟ್ರಾಟ್ಸ್ಕಿಯ ಉಲ್ಲೇಖ, ಇಂದಿನ ಕ್ರಾಂತಿಕಾರಿಗಳಿಗೆ ದಾರಿದೀವಿಗೆಯಾಗಿದೆ.**

ಲೆನಿನ್ ಮತ್ತು ಟ್ರಾಟ್ಸ್ಕಿಯವರ ಕಾಲದ ಬೊಲ್ಶೆವಿಕ್ ಪಕ್ಷ ಮಾರ್ಕ್ಸ್‌ವಾದದವನ್ನು ತನ್ನ ಸಿದ್ಧಾಂತವನ್ನಾಗಿಸಿಕೊಂಡು, ಪ್ರಜಾತಾಂತ್ರಿಕ ಕೇಂದ್ರಿಯತೆಯನ್ನು (Democratic Centralism) ತನ್ನ ಸಂಘಟನಾತ್ಮಕ ವಿಧಾನವನ್ನಾಗಿಸಿಕೊಂಡ ಪಕ್ಷವಾಗಿತ್ತು. ಇದರಿಂದಾಗಿ ಆ ಪಕ್ಷದಲ್ಲಿ ಅತ್ಯಧಿಕ ಪ್ರಜಾತಾಂತ್ರಿಕ ಹಕ್ಕುಗಳು ಮತ್ತು ಕಾರ್ಯಾಚರಣೆಯಲ್ಲಿ ಶಿಸ್ತು ಮತ್ತು ಒಗ್ಗಟ್ಟಿನ ಶಕ್ತಿ ಮಿಳಿತವಾಗಿತ್ತು.

1989ರವರೆಗೆ ಸಮಾಜವಾದದ ಹೆಸರಿನಲ್ಲಿ ಅಧಿಕಾರದಲ್ಲಿದ್ದ ಸ್ಟಾಲಿನ್‌ವಾದಿ ದೇಶಗಳ ಪತನ ಹಾಗು ಬಂಡವಾಳಶಾಹಿ ಆಕ್ರಮಣ ಇಂದು ಹಲವು ಕ್ರಾಂತಿಕಾರಿಗಳನ್ನು ನಿಷ್ಕ್ರಿಯರನ್ನಾಗಿಸಿದೆ ಹಾಗು ಎಡವಾದಿಗಳನ್ನು ಹತಾಶೆಯತ್ತ ದೂಡಿದೆ. ಇವರೆಲ್ಲರೂ ಇಂದು ಕ್ರಾಂತಿಕಾರಿ ಪಕ್ಷದ ಅವಶ್ಯಕತೆ ಹಾಗು ಔಚಿತ್ಯದ ಬಗ್ಗೆ ತರ್ಕ ಮಾಡುತ್ತಿದ್ದಾರೆ. ಅದರ ಬದಲಾಗಿ ಸಡಿಲವಾದ ಎಲ್ಲಾ ವರ್ಗಗಳನ್ನೂ ಒಳಗೊಂಡ ಸುಧಾರಣಾವಾದಿ(Liberal) ಪರ್ಯಾಯಗಳೇ ಇಂದಿನ ಆಧುನಿಕ ಯುಗದ ಅವಶ್ಯಕತೆ ಎಂಬುದು ಅವರ ವಾದ. ಈ ನಿಟ್ಟಿನ ಚರ್ಚೆಗೆ ಟ್ರಾಟ್ಸ್ಕಿಯ ವಿಚಾರ ಬಹಳ ಸಮಯೋಚಿತವಾದದ್ದು. ಕಾರ್ಮಿಕ ವರ್ಗದ ಹಿತಾಸಾಧನೆಗಾಗಿ ಹಾಗೂ ತಮ್ಮ ಮಾರ್ಕ್ಸ್‌ವಾದಿ ಕಾರ್ಯಪ್ರಣಾಳಿಕೆಯ ಮೂಲಕ ಉತ್ತಮ ಹೋರಾಟಗಾರರನ್ನು ಕ್ರಾಂತಿಕಾರಿ ಪಕ್ಷದತ್ತ ಸೆಳೆಯಲು ಅಂದಿನಿಂದಲೂ ಮಾರ್ಕ್ಸ್‌ವಾದಿಗಳು ದುಡಿಯುವ ವರ್ಗದ ವಿಶಾಲ ಜನಸಂಘಟನೆಗಳಲ್ಲಿ (ಉದಾ:ಟ್ರೇಡ್ ಯೂನಿಯನ್‌ಗಳು) ಪಾಲ್ಗೊಳ್ಳುತ್ತಲೇ ಇದ್ದಾರೆ. ಈ ನಿಟ್ಟಿನ ಕಾರ್ಯತಂತ್ರದಲ್ಲಿ, ಟ್ರಾಟ್ಸ್ಕಿಯ "ರಷ್ಯನ್ ಕ್ರಾಂತಿಯ ಚರಿತ್ರೆ" ಪುಸ್ತಕದಲ್ಲಿ ಪ್ರಜಾತಾಂತ್ರಿಕ ಕೇಂದ್ರೀಯತೆಯಲ್ಲಿ ನೆಲೆಗೊಂಡಂಥಹ ಕ್ರಾಂತಿಕಾರಿ ಪಕ್ಷವಿಲ್ಲದಿದ್ದಲ್ಲಿ, ರಷ್ಯನ್ ಕ್ರಾಂತಿಯು ಜಯ ಗಳಿಸಲು ಹೇಗೆ ಅಸಾಧ್ಯವಾಗುತ್ತಿತ್ತು ಎಂಬುದನ್ನು ವಿವರಿಸಿದ್ದಾರೆ.

ಇಂದು ವಿವಿಧ ದೇಶದ ಸಮಾಜವಾದಿಗಳು, 1917ರ ರಷ್ಯನ್ ಕ್ರಾಂತಿಗೆ ವಿಭಿನ್ನವಾದ ಸಂದರ್ಭಗಳಲ್ಲಿ ಮತ್ತು ಬೇರೆಯೇ ಪರಿಸ್ಥಿತಿಗಳಲ್ಲಿ ಹೋರಾಟಗಳನ್ನು ನಡೆಸುತ್ತಿದ್ದಾರೆ. ಆದರೂ ಇಂದಿಗೂ ಕ್ರಾಂತಿಕಾರಿ ಪಕ್ಷದ ಸ್ವತಂತ್ರ ಕಾರ್ಯಪ್ರಣಾಳಿಕೆ ಮತ್ತು ಸಂಘಟನಾ ವಿಧಾನಗಳು ಬಲಿಷ್ಠ ಬಂಡವಾಳಿ ವ್ಯವಸ್ಥೆಯ ನಿರ್ಮೂಲನಕ್ಕೆ ಮತ್ತು ಸಮರ್ಥವಾದ ಸಮಾಜವಾದಿ ಕ್ರಾಂತಿಯ ಸಾಕಾರಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಸಾಧನಗಳು.

ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಮತ್ತಷ್ಟು ಸಿರಿವಂತಗೊಳಿಸಿದ ಟ್ರಾಟ್ಸ್ಕಿಯ ಹಲವು ಬರಹಗಳಲ್ಲಿ ಬಹುಮುಖ್ಯವಾದದ್ದು **'ನಿರಂತರ ಕ್ರಾಂತಿಯ ಸಿದ್ಧಾಂತ'** ಹಾಗೂ ಸೋವಿಯತ್ ದೇಶಗಳಲ್ಲಿ ಅಧಿಕಾರಶಾಹಿ ಪಿಡುಗಿನ ವೃದ್ಧಿ ಮತ್ತು ಸ್ಟಾಲಿನ್‌ವಾದಿ ಪ್ರತಿಕ್ರಾಂತಿಯನ್ನು ವಿವರಿಸುವ **"ರೆವೆಲ್ಯೂಷನ್ ಬಿಟ್ರೇಡ್"**.

ಇಂದು ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಮತ್ತು ಏಷಿಯಾ ದೇಶಗಳಲ್ಲಿನ ಹಲವಾರು ಚಳವಳಿಗಳಿಗೆ, ಮೊದಲಿದ್ದ ಮಾಸ್ಕೊ ಹಾದಿ ಇಲ್ಲವಾಗಿದೆ. ಸ್ಟಾಲಿನ್‌ವಾದದ ಪತನದ ನಂತರ, ವಿರೂಪಗೊಂಡ ಕಾರ್ಮಿಕ ರಾಜ್ಯಗಳ ಮಾದರಿ ಇಲ್ಲವಾಗಿದೆ. ಆದರೆ, ಕಾರ್ಮಿಕ ವರ್ಗ ಮತ್ತು ರೈತ ಸಮುದಾಯ ಮಾಸ್ಕೋ ಮಾದರಿ ಈಗ ಇಲ್ಲವೆಂಬ ಕಾರಣಕ್ಕಾಗಿ ತಾವು ಉಳಿವಿಗಾಗಿ ನಡೆಸುತ್ತಿರುವ ದೈನಂದಿನ ಹೋರಾಟಗಳನ್ನು ನಿಲ್ಲಿಸಲಾಗದು. ಈಗಾಗಲೇ ಸಾಬೀತಾಗಿರುವಂತೆ ಜಗತ್ತಿನಾದ್ಯಂತ ಅದರಲ್ಲೂ ನವ ವಸಾಹತು ದೇಶಗಳಲ್ಲಿ ಬೃಹತ್ ಚಳವಳಿಗಳು ಅನಿವಾರ್ಯ. ಈ ಚಳವಳಿಗಳ ಮುಂದಾಳತ್ವ ವಹಿಸುತ್ತಿರುವ ನೈಜ ಕ್ರಾಂತಿಕಾರಿಗಳಿಗೆ ಟ್ರಾಟ್ಸ್ಕಿಯ ನಿರಂತರ ಕ್ರಾಂತಿಯ ಸಿದ್ದಾಂತ ಅತಿ ಅವಶ್ಯಕ.

**ನಿರಂತರ ಕ್ರಾಂತಿ ಸಿದ್ಧಾಂತ(ಥಿಯರಿ ಆಫ್ ಪರ್ಮನೆಂಟ್ ರೆವೆಲ್ಯೂಷನ್)**

**20ನೇಯ ಶತಮಾನದ ಆದಿಯಲ್ಲಿ, ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಾಧ್ಯತೆಗಳ ಬಗ್ಗೆ ಟ್ರಾಟ್ಸ್ಕಿ ಅಧ್ಯಯನ ನಡೆಸುತ್ತಿದ್ದಾಗ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳಲ್ಲಿ ನಡೆದ ವಿದ್ಯಮಾನಗಳಂತೆಯೇ ಬಂಡವಾಳಶಾಹಿ ಕ್ರಾಂತಿ ನಡೆಯಲು ರಷ್ಯಾದ ಶೈಶವಾವಸ್ಥೆಯ ಬಂಡವಾಳಿ ವರ್ಗ ಅತ್ಯಂತ ಶಕ್ತಿಹೀನವೆಂಬುದನ್ನು ಟ್ರಾಟ್ಸ್ಕಿ ಮನಗಂಡ. ಇದರಿಂದಾಗಿ ರಷ್ಯದ ಬಂಡವಾಳಿ ವರ್ಗ ತನ್ನ ಬಂಡವಾಳಿ ಪ್ರಜಾತಂತ್ರ ಕ್ರಾಂತಿಯನ್ನು ತಾವೇ ಖುದ್ದಾಗಿ ನಡೆಸಲಾಗದು ಎಂಬ ಚಾರಿತ್ರಿಕ ಸತ್ಯವನ್ನು ಟ್ರಾಟ್ಸ್ಕಿ ಪ್ರತಿಪಾದಿಸಿದ.**

ಅದಲ್ಲದೆ ಈ ದುರ್ಬಲ ರಷ್ಯನ್ ಬಂಡವಾಳಿ ವರ್ಗಕ್ಕೆ ಭೂ ಒಡೆತನದಲ್ಲಿ ತನ್ನದೇ ಆದ ಹಿತಾಸಕ್ತಿ ಇತ್ತು ಮತ್ತು ಜಮೀನ್ದಾರರು ಔದ್ಯೋಗಿಕರಂಗಗಳಲ್ಲೂ ಹಣ ತೊಡಗಿಸಿದ್ದರು. ಜಮೀನ್ದಾರರ ಅಧಿಕಾರಗಳಿಗೆ ಸವಾಲೆಸೆಯುವ ಯಾವುದೇ ನಿರ್ಣಾಯಕ ಭೂ ಸುಧಾರಣೆಗಳನ್ನು ಭೂ ಮಾಲೀಕರು ಮತ್ತು ಬಂಡವಾಳಶಾಹಿಗಳು ಹಾಗು ಅವರ ರಾಜಕೀಯ ಪ್ರತಿನಿಧಿಗಳು ವಿರೋಧಿಸುವ ಶತಃಸಿದ್ಧ ಪರಿಸ್ಥಿತಿ ಇತ್ತು.

**ಈ ರೀತಿಯ ಕಾಲಘಟ್ಟದ ಒತ್ತಡದಲ್ಲಿ, ಒಟ್ಟಾರೆ ಜನಸಂಖ್ಯೆಯಲ್ಲಿ ಅಲ್ಪಸಂಖ್ಯೆಯಲ್ಲಿದ್ದ ಕಾರ್ಮಿಕವರ್ಗವೇ, ರೈತಾಪಿ ಸಮುದಾಯದ ನೆರವಿನೊಂದಿಗೆ ಬಂಡವಾಳಿ ಪ್ರಜಾತಾಂತ್ರಿಕ ಕ್ರಾಂತಿಯ ಕರ್ತವ್ಯಗಳನ್ನು ಮಾಡುತ್ತದೆ ಎಂದು ಪ್ರತಿಪಾದಿಸಿದ್ದವರಲ್ಲಿ ಮೊತ್ತಮೊದಲಿಗ ಲಿಯಾನ್ ಟ್ರಾಟ್‌ಸ್ಕಿ.**

ಆದರೆ, ಕಾರ್ಮಿಕ ವರ್ಗ ಬಂಡವಾಳಿ ಪ್ರಜಾತಾಂತ್ರಿಕ ಕ್ರಾಂತಿಯ ನೇತೃತ್ವವನ್ನು ವಹಿಸಿದ ನಂತರ, ಅಧಿಕಾರವನ್ನು ಬಂಡವಾಳಶಾಹಿಗೆ ವಾಪಸ್ಸು ಕೊಡದು, ಬದಲಾಗಿ ಕ್ರಾಂತಿಕಾರಿ ಪಕ್ಷದ ನೇತೃತ್ವದಲ್ಲಿ ಸಮಾಜವಾದಿ ಕರ್ತವ್ಯಗಳನ್ನು ಕೈಗೆತ್ತಿಕೊಳ್ಳುವತ್ತ ನಿರಂತರವಾಗಿ ಮುನ್ನುಗುತ್ತಾರೆ. ಇದರಿಂದಾಗಿ ಅಂತರರಾಷ್ಟ್ರೀಯವಾಗಿಯೂ ಕ್ರಾಂತಿಕಾರಿ ಚಳವಳಿಗಳು ಭುಗಿಲೇಳುತ್ತವೆ ಎಂಬುದೇ ಲಿಯಾನ್ ಟ್ರಾಟ್‌ಸ್ಕಿಯ ನಿರಂತರ ಕ್ರಾಂತಿಯ ವಾದವಾಗಿತ್ತು. 1917ರ ರಷ್ಯನ್ ಕ್ರಾಂತಿ, ಟ್ರಾಟ್‌ಸ್ಕಿಯ ಈ ಸಿದ್ಧಾಂತವನ್ನು ಅಕ್ಷರಶಃ ಸಾಬೀತುಪಡಿಸಿದ ಘಟನೆ.

ಈ ರೀತಿಯ ಭವಿಷ್ಯ ನುಡಿಯ ಬಗ್ಗೆ ಲೆನಿನ್‌ರಿಗೆ ತಮ್ಮದೇ ಅಭಿಪ್ರಾಯಗಳಿದ್ದರೂ(1917) ಕ್ರಾಂತಿಯ ಹೊತ್ತಿಗೆ ನಡೆದ ವಿದ್ಯಮಾನಗಳಿಂದ ಅವರು ಟ್ರಾಟ್‌ಸ್ಕಿಯ ಮಾತನ್ನು ಒಪ್ಪಿಕೊಂಡರು. ಮೊದಲಿಗೆ ಬೊಲ್ಷೆವಿಕ್ ಪಕ್ಷದ ದಿನನಿತ್ಯದ ರಣನೀತಿ ರೂಪಿಸುವಲ್ಲಿ ಟ್ರಾಟ್‌ಸ್ಕಿಯು ಪಾಲ್ಗೊಳ್ಳಲಾಗದ್ದು ಸರ್ವವಿದಿತ, ಆದರೆ ಕ್ರಾಂತಿ ಸಮೀಪಿಸುತ್ತಿದ್ದ ಕಾಲಘಟ್ಟದಲ್ಲಿ ಟ್ರಾಟ್‌ಸ್ಕಿಯನ್ನು, ಲೆನಿನ್ ಪಕ್ಷಕ್ಕೆ ಬರಮಾಡಿಕೊಂಡರು. **"ಪಕ್ಷದಿಂದ ಹೊರಗುಳಿದಿದ್ದ ಅತ್ಯುತ್ತಮ ಬೊಲ್ಷೆವಿಕ್"** ಎಂದು ಹೊಗಳಿದರು.

**ಆದರೆ ಲೆನಿನ್‌ರ ಕಾಲನಂತರ ಅಧಿಕಾರದ ಗದ್ದುಗೆ ಏರಿದ ಸ್ಟಾಲಿನ್ ಮಿಲಿಟರಿ ಬಣ, ಟ್ರಾಟ್‌ಸ್ಕಿಯವರ ತೀಕ್ಷ್ಣ ವಿಮರ್ಶನಾ ದೃಷ್ಟಿಕೋನವನ್ನು ಸಹಿಸಲಿಲ್ಲ. ಇದಕ್ಕೆ ಮುಖ್ಯ ಕಾರಣ ಲೆನಿನ್ ಮತ್ತು ಟ್ರಾಟ್‌ಸ್ಕಿಗಳ ಬೊಲ್ಷೆವಿಕ್ ಪಕ್ಷವನ್ನು ಅದರ ಅತಂಸ್ಸತ್ವವಾದ ಅಂತರರಾಷ್ಟ್ರೀಯ ಕ್ರಾಂತಿಯಿಂದ ವಿಮುಖಗೊಳಿಸಬೇಕಾದ ಅನಿವಾರ್ಯತೆ ಸ್ಟಾಲಿನ್ ಅವರದ್ದಾಗಿತ್ತು. ಹೀಗಾಗಿ 'ಒಂದು ದೇಶದಲ್ಲಿ ಸಮಾಜವಾದ' ಮತ್ತು ಎರಡು ಹಂತಗಳ ಕ್ರಾಂತಿಯೆಂಬ ಹುಸಿ ಮತ್ತು ಅತ್ಯಂತ ಅಪಾಯಕಾರಿ ಸಿದ್ಧಾಂತಗಳನ್ನು ಸ್ಟಾಲಿನ್‌ವಾದಿಗಳು ಪ್ರಪಂಚದಾದ್ಯಂತ ಪ್ರಚಾರ ಮಾಡತೊಡಗಿದರು.**

ಅದುವರೆವಿಗೆ ವಿಶ್ವಕ್ರಾಂತಿಯ ವಾಹಕವಾಗಿದ್ದ ಮೂರನೇಯ ಅಂತರರಾಷ್ಟ್ರೀಯ(ಥರ್ಡ್ ಇಂಟರ್‌ನ್ಯಾಷನಲ್) ಸಂಘಟನೆಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಖೋಟಾ ತತ್ವಗಳನ್ನು ಮುಂದಾಗಿಸಿದರು. ತಮ್ಮ ಈ ಚಿತಾವಣೆಗೆ ಲೆನಿನ್‌ರ ಸಹಯೋಗಿ, ಅತ್ಯಂತ ಪ್ರತಿಭಾವಂತ ವಾಗ್ಮಿ ಹಾಗು ಬೊಲ್ಷೆವಿಕ್ ಪಕ್ಷದ ಕೆಂಪು ಸೇನೆಯನ್ನು ಸಂಘಟಿಸಿದ ಟ್ರಾಟ್‌ಸ್ಕಿ ತಡೆಯಾಗುತ್ತಾನೆಂಬ ಅರಿವು ಅವರಿಗಿತ್ತು. ಮೊದಲಿಗೆ ಟ್ರಾಟ್‌ಸ್ಕಿಯನ್ನು ಪಕ್ಷದಲ್ಲಿ ಮೂಲೆ ಗುಂಪಾಗಿಸಿ, ತದನಂತರ ಅವನಿಗೆ ಲೆನಿನ್ ವಿರೋಧಿಯೆಂಬ ಹಣೆಪಟ್ಟಿಯಿತ್ತು, 1929ರ ಸಮಯದಲ್ಲಿ ಗಡಿಪಾರು ಮಾಡಲಾಯಿತು. ಯಾವುದೇ ಯುರೋಪಿನ ದೇಶಗಳೂ ಟ್ರಾಟ್‌ಸ್ಕಿಗೆ ತಮ್ಮ ದೇಶಗಳಲ್ಲಿ ನೆಲೆಯೂರಲು ಅವಕಾಶ ಕೊಡಲಿಲ್ಲ. ಕೊನೆಗೆ, ತಮ್ಮ ರಾಜಕೀಯ ಗೆಳೆಯರ ಸಹಾಯದಿಂದ ಟ್ರಾಟ್‌ಸ್ಕಿ, ಮೆಕ್ಸಿಕೋದ ಹೊರಗಡೆ ಒಂದು ರೀತಿಯ ದಿಗ್ಬಂದನದಲ್ಲಿ ವಾಸಿಸಬೇಕಾಯಿತು.(ಆ ಹೊತ್ತಿಗಾಗಲೇ ಟ್ರಾಟ್‌ಸ್ಕಿ ಪರಿವಾರದ ಮೇಲೆ ಹಲವಾರು ಬಾರಿ ಅಪಾಯಕಾರಿ ಹಲ್ಲೆಗಳನ್ನು ಸ್ಟಾಲಿನ್‌ರ ಸಹಚರರು ನಡೆಸಿದ್ದರು.) ನೆಲೆಯೇ ಇಲ್ಲದ ಶರಣಾರ್ಥಿಯಾಗಿದ್ದರೂ ಟ್ರಾಟ್‌ಸ್ಕಿ ತನ್ನ ರಾಜಕೀಯ ವಿಮರ್ಶೆ ಮತ್ತು ಸ್ಟಾಲಿನ್‌ವಾದದ ಟೀಕೆಯನ್ನು ಬಿಡಲಿಲ್ಲ. ಈ ಸಂದರ್ಭದಲ್ಲಿ ಅವರು 1936ರಲ್ಲಿ ಬರೆದ **'ಕ್ರಾಂತಿಗಾದ ದ್ರೋಹ'**(ರೆವೆಲ್ಯೂಷನ್ ಬಿಟ್ರೇಡ್) ಪುಸ್ತಕದಲ್ಲಿ, ಮಿಲಿಟರಿ ಅಧಿಕಾರಶಾಹಿಯ ಕ್ರಾಂತಿವಿರೋಧಿ ಸೆಲೆ ಇದ್ದಾಗ್ಯೂ ಕೂಡ, ಸೋವಿಯತ್ ಒಕ್ಕೂಟದಲ್ಲಿ ಬಂಡವಾಳಶಾಹಿ ನಿರ್ಮೂಲನದಿಂದಾಗಿ ಮತ್ತು ಕಾರ್ಮಿಕ ರಾಜ್ಯ ಸ್ಥಾಪನೆಯಿಂದಾಗಿ ನಡೆದ ಅಸಾಧಾರಣ ಅಭಿವೃದ್ಧಿಯನ್ನು ವಿವರಿಸಿದ್ದಾರೆ.

ಆದರೆ ಆ ಕಾರ್ಮಿಕ ರಾಜ್ಯ ಹೇಗೆ ಸ್ಟಾಲಿನ್‌ರ ಕಾಲದಲ್ಲಿ ವಿಕೃತಗೊಂಡಿತು ಮತ್ತು ಎಲ್ಲ ಜನವಿರೋಧವನ್ನು ಸ್ಟಾಲಿನ್‌ವಾದಿ ಅಧಿಕಾರಿ ಯಂತ್ರ ಹೇಗೆ ಹೊಸಕಿತು ಎಂಬುದನ್ನೂ ವಿವರಿಸಿದ್ದಾರೆ. ಸ್ಟಾಲಿನ್, ಸೋವಿಯತ್ ಒಕ್ಕೂಟದಲ್ಲಿದ್ದ ಎಲ್ಲಾ ಪ್ರಜಾತಂತ್ರವನ್ನೂ ನಿರ್ನಾಮ ಮಾಡಿ, ತನ್ನ ಸುತ್ತ ಅಧಿಕಾರವನ್ನು ಕೇಂದ್ರೀಕರಿಸಿಕೊಂಡು, ಕಾರ್ಮಿಕವರ್ಗ ಹಾಗೂ ರೈತಾಪಿಗಳಿಗೆ, ಸಮಾಜವನ್ನು ಮುನ್ನಡೆಸುವಲ್ಲಿದ್ದ ಎಲ್ಲಾ ಕಾರ್ಮಿಕ-ಜನತಾಂತ್ರಿಕ ಹಕ್ಕುಗಳನ್ನು ಕಿತ್ತುಕೊಂಡ ಬಗೆಯನ್ನು ಟ್ರಾಟ್‌ಸ್ಕಿ ತಮ್ಮ **'ಕ್ರಾಂತಿಗಾದ ದ್ರೋಹ'** ಬರಹದಲ್ಲಿ ವಿವರಿಸಿದ್ದಾರೆ.

**ಸ್ಟಾಲಿನ್‌ರ ಆಡಳಿತದಲ್ಲಿ ಸೋವಿಯತ್ ಒಕ್ಕೂಟದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಬುಡಮೇಲು ಮಾಡಲಾಗಿತ್ತಾದರೂ, ಅದು ಒಂದು ಆರೋಗ್ಯಕರ, ಸಾಮರಸ್ಯ ಹೊಂದಿದ ಕಾರ್ಮಿಕ ರಾಜ್ಯವಾಗಿರಲಿಲ್ಲ. ಬದಲಾಗಿ ಒಂದು ವಿಕೃತ ಅಥವಾ ವಿರೂಪಗೊಂಡ ಕಾರ್ಮಿಕ ರಾಜ್ಯವಾಗಿತ್ತು ಎಂಬುದು ಲೆನಿನ್‌ರ ಸಹಯೋಗಿ ಟ್ರಾಟ್‌ಸ್ಕಿಯ ಅಭಿಪ್ರಾಯ. ಒಂದು ನೈಜ ಆರೋಗ್ಯವಂತ ಕಾರ್ಮಿಕ ರಾಜ್ಯದ ಸ್ಥಾಪನೆಗೆ ಕಾರ್ಮಿಕ ಪ್ರಜಾತಂತ್ರವಿಲ್ಲದೆ ಮತ್ತು ಸಮಾಜವನ್ನು ನಡೆಸುವಲ್ಲಿ ಕಾರ್ಮಿಕ ವರ್ಗಕ್ಕೆ ಎಲ್ಲಾ ಹಂತಗಳಲ್ಲೂ ಪಾಲಿಲ್ಲದೆ ಸಾಧ್ಯವೇ ಇಲ್ಲ ಎಂಬುದು ಟ್ರಾಟ್‌ಸ್ಕಿ ಮತ್ತು ಲೆನಿನ್‌ರ ಖಚಿತ ಅಭಿಪ್ರಾಯವಾಗಿತ್ತು.**

ಸೋವಿಯತ್ ಒಕ್ಕೂಟದಲ್ಲಿ ಒಂದು ನೂತನ ರಾಜಕೀಯ ಕ್ರಾಂತಿ ನಡೆಸಬೇಕೆಂಬ ಕರೆಯನ್ನಿತ್ತಿದ್ದ ಟ್ರಾಟ್‌ಸ್ಕಿಗೆ ಆ ಕ್ರಾಂತಿ ಅಲ್ಲಿದ್ದ ಅಧಿಕಾರಶಾಹಿಯನ್ನು ಒದ್ದೋಡಿಸಿ ನೈಜ ಕಾರ್ಮಿಕ ಹತೋಟಿ ಮತ್ತು ಕಾರ್ಮಿಕ ಪ್ರಜಾತಂತ್ರವನ್ನು ಸ್ಥಾಪಿಸುವ ರಾಜಕೀಯ ಕ್ರಾಂತಿಯಾಗಬೇಕೆಂಬ ಕನಸು ಅವರದ್ದಾಗಿತ್ತು. ಅವರ ಈ ವಿಮರ್ಶೆ, ತದನಂತರ ಸ್ಥಾಪನೆಯಾದ ಪೂರ್ವ ಯುರೋಪ್, ಚೈನಾ ಮತ್ತು ಕ್ಯೂಬಾ ಆಡಳಿತಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ಭವಿಷ್ಯದಲ್ಲಿ ಮಾರ್ಕ್ಸ್‌ವಾದಿಗಳಿಗೆ ಸಹಾಯ ಮಾಡಿತು. ಈ ದೇಶಗಳಲ್ಲೂ ಸಹ ಬಂಡವಾಳಶಾಹಿ ಆರ್ಥಿಕ ಸಂಬಂಧಗಳು ನಿರ್ಮೂಲನೆಗೊಂಡರೂ, ಅಲ್ಲಿ ಸ್ಥಾಪನೆಗೊಂಡದ್ದು, ವಿರೂಪ ಹೊಂದಿದ ಕಾರ್ಮಿಕ ರಾಜ್ಯಗಳೇ. ಈ ದೇಶಗಳಲ್ಲಿ ನಡೆದ ಕ್ರಾಂತಿಕಾರಿ ಬದಲಾವಣೆಗಳು ಬಂಡವಾಳಶಾಹಿ ಮತ್ತು ಜಮೀನ್ದಾರಿ ಪದ್ಧತಿಗಳನ್ನು ನಾಶಮಾಡಿದವು. ಆದರೆ ಒಂದು ಆರೋಗ್ಯಕರ ಕಾರ್ಮಿಕ ರಾಜ್ಯಕ್ಕೆ ಅವಶ್ಯಕವಾಗಿ ಬೇಕಾದ ಕಾರ್ಮಿಕ ಪ್ರಜಾತಂತ್ರದ "ಆಮ್ಲಜನಕ"(ಆಕ್ಸಿಜನ್) ಈ ದೇಶಗಳಲ್ಲಿ ಇರಲಿಲ್ಲ ಎಂಬುದನ್ನು ನಾವು ಮನಗಾಣತ್ತೇವೆ.

**ಕಳೆದ ಒಂದು ದಶಕದಲ್ಲೇ ಹಲವಾರು ಡೋಲಾಯಮಾನ ಸಂಘಟನೆಗಳು ವಿಶ್ವದ ರಾಜಕೀಯ ನಕ್ಷೆಯನ್ನೇ ಏರುಪೇರಾಗಿಸಿದೆ. ಮಾರ್ಕ್ಸ್‌ವಾದದ ದಿಕ್ಸೂಚಿಯನ್ನು ಪಕ್ಕಕ್ಕಿಟ್ಟವರು, ದಾರಿ ತಪ್ಪುವುದು ಖಂಡಿತ.**

**'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'** ಮತ್ತು **ಕಮಿಟಿ ಫಾರ್ ಎ ವರ್ಕರ್ಸ್ ಇಂಟರ್ ನ್ಯಾಷನಲ್ (CWI)** ಮಾರ್ಕ್ಸ್‌ವಾದದ ಸಿದ್ಧಾಂತದಲ್ಲಿ ಅಚಲವಾದ ವಿಶ್ವಾಸ ಇರಿಸಿ ಟ್ರಾಟ್‌ಸ್ಕಿವಾದದ ವಿಮರ್ಶನ ರೀತಿಯನ್ನು ತನ್ನದಾಗಿಸಿಕೊಂಡಿರುವ ಸಂಘಟನೆಗಳು. CWIನ ಅಂತರರಾಷ್ಟ್ರೀಯದ ನೇತೃತ್ವದಲ್ಲಿ 45 ದೇಶಗಳಲ್ಲಿ, ಕ್ರಾಂತಿಕಾರಿ ಚಿಂತನೆ ಮತ್ತು ಸಂಘಟನೆಗಳನ್ನು ನಡೆಸುವ ಪಕ್ಷ-ಗುಂಪುಗಳು ಸ್ಥಾಪನೆಯಾಗಿವೆ. **CWI** ನೇತೃತ್ವದ ಈ ಸಂಘಟನೆಗಳು ನಡೆಸುತ್ತಿರುವ ಅವಿರತ ಹೋರಾಟ, ಶ್ರಮಗಳೇ ಟ್ರಾಟ್‌ಸ್ಕಿ ಮತ್ತು ಅವರ ವಿಚಾರಗಳಿಗೆ ಸಿಕ್ಕ ನಿಜವಾದ ಮುನ್ನಡೆಯಾಗಿದೆ.

**ಮಾರ್ಕ್ಸ್‌ವಾದಿಗಳು ವ್ಯಕ್ತಿಪೂಜೆಯನ್ನು ಮಾಡುವುದಿಲ್ಲವಾದರೂ, ಲಿಯಾನ್ ಟ್ರಾಟ್‌ಸ್ಕಿ ಒಬ್ಬ ಸಾಹಸಿ ಹಾಗೂ ಧೈರ್ಯಶಾಲಿ ಕ್ರಾಂತಿಕಾರಿ, ಒಬ್ಬ ಮಹಾನ್ ಕ್ರಾಂತಿಕಾರಿ ತತ್ವಜ್ಞ ಮತ್ತು ತನ್ನ ಕೊನೆಯುಸಿರಿನವರೆವಿಗೂ ಸಮಾಜವಾದಿ ಕ್ರಾಂತಿಯ ರಕ್ಷಣೆಗೆ ತನ್ನನ್ನು ತೊಡಗಿಸಿಕೊಂಡವನು ಎಂಬುದು ನಿಸ್ಸಂದೇಹ. ಈ ಕಾರಣಕ್ಕಾಗಿಯೇ ಇಂದು ನಾವು ಮತ್ತು ಮುಂದಿನ ಜನಾಂಗದ ಮಾರ್ಕ್ಸ್‌ವಾದಿಗಳು ಲಿಯಾನ್ ಟ್ರಾಟ್‌ಸ್ಕಿಯನ್ನು ಒಬ್ಬ ಕಾರ್ಮಿಕ ವರ್ಗದ ಹೀರೋ ಎಂದು ತಿಳಿಯುತ್ತೇವೆ. ಅದಕ್ಕಾಗಿಯೇ ನಮ್ಮ ರಾಜಕೀಯ ಶತ್ರುಗಳು ನಮ್ಮನ್ನು ಟ್ರಾಟ್‌ಸ್ಕಿವಾದಿಗಳೆಂದು ಜರೆದಾಗ ನಮಗೆ ನಿಜಕ್ಕೂ ಹೆಮ್ಮೆ ಎನಿಸುತ್ತದೆ.**

ಟ್ರಾಟ್‌ಸ್ಕಿಯ ಕನಸಾದ ಅಂತರರಾಷ್ಟ್ರೀಯ ಸಮಾಜವಾದಿ ಕ್ರಾಂತಿಯನ್ನು ನನಸಾಗಿಸಿ, ಅವರ ವಾದ ವಿಚಾರಗಳು ಸದಾ ನೆನಪಿನಲ್ಲಿ ಉಳಿಯುವಂತೆ ಮಾಡುವ ಜವಾಬ್ದಾರಿ ನಮ್ಮದಾಗಿದೆ.

*** ಜಗದೀಶ್ ಜಿ ಚಂದ್ರ**

# ಮರುಕಳಿಸದಿರಲಿ ಕಂಧಮಾಲ್ ಇನ್ನೆಂದು

## ಅಪರಾಧಿಗಳಿಗೆ ಶಿಕ್ಷೆ ವಿಧಿಸಿ – ನೊಂದವರಿಗೆ ಪರಿಹಾರ ಸಿಗಲಿ




ಗುಜರಾತ್ ಕೋಮುದಳ್ಳುರಿಯ ನಂತರ, ಭಾರತ ಅನುಭವಿಸಿದ ಅತ್ಯಂತ ದೊಡ್ಡ ಕೋಮುವಾದಿ ದೌರ್ಜನ್ಯ, ಒರಿಸ್ಸಾ ರಾಜ್ಯದ ಕಂಧಮಾಲ್ ಜಿಲ್ಲೆಯಲ್ಲಿ 2008ರ ಆಗಸ್ಟ್ 25ರಂದು ನಡೆಯಿತು. 350ಕ್ಕೂ ಹೆಚ್ಚು ಚರ್ಚ್‌ಗಳು, ಆದಿವಾಸಿ ಮತ್ತು ದಲಿತ ಕ್ರೈಸ್ತರ ಪ್ರಾರ್ಥನಾ ಸ್ಥಳಗಳು ಧ್ವಂಸವಾದವು. 6500 ಬಡ-ದಲಿತರ ಮನೆಗಳು ನಾಶಗೊಂಡವು. 56000ಕ್ಕೂ ಹೆಚ್ಚು ಆದಿವಾಸಿ-ದಲಿತರನ್ನು ಬಲವಂತವಾಗಿ ಗುಳೆ ಎಬ್ಬಿಸಲಾಯಿತು. ಸುಮಾರು 90 ಜನ ಕೊಲ್ಲಲ್ಪಟ್ಟರು. 40ಕ್ಕೂ ಮಿಗಿಲು ದಲಿತ ಹಾಗೂ ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಲೈಂಗಿಕ ಹಿಂಸೆ ನಡೆಯಿತು. ಹಲವಾರು ಶೈಕ್ಷಣಿಕ, ಸಾಮಾಜಿಕ ಮತ್ತು ವೈದ್ಯಕೀಯ ಸಂಸ್ಥೆಗಳನ್ನು ಲೂಟಿ ಮಾಡಿ ನಾಶಗೊಳಿಸಲಾಯಿತು.

ಈ ಪೂರ್ವಯೋಜಿತ ಕೋಮುವಾದಿ ಧಾಳಿ ಒರಿಸ್ಸಾ ರಾಜ್ಯದ ಇನ್ನಿತರ ಭಾಗಗಳಿಗೆ ಮತ್ತು ಬೇರೆ ರಾಜ್ಯಗಳಿಗೂ ಹಬ್ಬಿ ಇಂದಿಗೂ ಈ ದಳ್ಳುರಿಯ ಬೇಗೆಯಲ್ಲಿ ಭಾರತ ನಲುಗುತ್ತಿದೆ. ಕಂಧಮಾಲ್ ಧಾಳಿಯಲ್ಲಿ ನಲುಗಿ ನೊಂದ ಸಂತ್ರಸ್ತರಿಗೆ ಅಲ್ಲಿನ ಸರ್ಕಾರ ಕೊಟ್ಟಿರುವ ನೆರವು-ಪರಿಹಾರಗಳು ಉದಹರಿಸಲಾಗದಷ್ಟು ನಾಚಿಕೆಗೇಡಿನ ನಡವಳಿಕೆಯಾಗಿದೆ.

**ಪ್ರತಿನಿತ್ಯ ಕಂಧಮಾಲ್-ಗುಜರಾತ್-ಮುಝಫರ್‌ನಗರಗಳು ಎಲ್ಲೆಡೆ ನಡೆಯುತ್ತಿವೆ.....**

ಆಡಳಿತಾರೂಢ, ಆರ್‌ಎಸ್‌ಎಸ್ ನೇತೃತ್ವದ, ಬಿಜೆಪಿಯ ಮೋದಿ ಸರ್ಕಾರ ಕಳೆದ ಒಂದೂವರೆ ವರುಷದಲ್ಲಿ ಕೋಮುವಾದಿ ದ್ವೇಷ ಪ್ರಚಾರವನ್ನು ಅತ್ಯಂತ ಧೈರ್ಯವಾಗಿ ಹಾಗೂ ಕುಯುಕ್ತಿಯಿಂದ ನಡೆಸಿದೆ. ದೇಶದ ಹಲವು ಭಾಗಗಳಲ್ಲಿ ಲವ್-ಜಿಹಾದದ ಹುಯಿಲೆಬ್ಬಿಸಿ, ಘರ್‌ವಾಪಸಿಯ ನಾಟಕವಾಡಿ ಧಾರ್ಮಿಕ ಅಲ್ಪಸಂಖ್ಯಾತರ ಮತ್ತು ದಲಿತ ಸಮುದಾಯಗಳ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷ ಹಿಂಸಾಚಾರ ನಡೆಸಿದೆ. ಕಂಧಮಾಲ್ ಜಿಲ್ಲೆಯಲ್ಲಿ ಘರ್‌ವಾಪಸಿಗೂ ಮುಂಚೆ ಬಲವಂತವಾಗಿ ದಲಿತ ಕ್ರೈಸ್ತರನ್ನು ಹಿಂದೂ ಧರ್ಮಕ್ಕೆ ಮತಾಂತರಗೊಳಿಸಲಾಗಿದೆ. ಈ ಮತಾಂಧತೆಗೆ ಕೈಜೋಡಿಸುವ ಕೆಲಸವನ್ನು ಈ ದೇಶದ ನ್ಯಾಯಾಂಗ ಹಾಗೂ ರಾಜ್ಯಾಂಗಗಳು ಯಥೇಚ್ಛವಾಗಿ ನಡೆಸಿ, ಆಳುವ ವರ್ಗಗಳಲ್ಲಿ ಹುದುಗಿರುವ ಜಾತೀಯತೆ ಮತ್ತು ಕೋಮುವಾದವನ್ನು ಪ್ರದರ್ಶಿಸಿದೆ.

ಇತ್ತೀಚೆಗೆ ತಮಿಳುನಾಡಿನ ಶೇಷಾಚಲಂನಲ್ಲಿ ನಡೆದ 70 ಜನ ದಲಿತರ ಹತ್ಯೆ, ಆಂಧ್ರ/ತೆಲಂಗಾಣಗಳಲ್ಲಿ ನಡೆದ ಎನ್‌ಕೌಂಟರ್ ಸಾವುಗಳು, ಕಳೆದ ಒಂದು ವರುಷದಿಂದ ಇಂದಿಗೂ ಭಯದ ವಾತಾವರಣದಲ್ಲಿ ಜೀವ ಸವೆಸುತ್ತಿರುವ ಮುಝಫರ್ ನಗರದ ಮುಸ್ಲಿಂ ಬಾಂಧವರ ಅಸಹಾಯಕತೆ, ಭಾರತ ಈಶಾನ್ಯ ರಾಜ್ಯಗಳ ಮತ್ತು ಕಾಶ್ಮೀರದ ಜನತೆಯ ಜನತಾಂತ್ರಿಕ ಹಾಗೂ ದೇಶೀಯ ಹಕ್ಕುಗಳನ್ನು ದಮನ ಮಾಡಲೆಂದೆ ಮತ್ತಷ್ಟು ತೀವ್ರ ಗೊಳಿಸಲಾಗಿರುವ ಂಈಖಿಕಂ ಕರಾಳ ಕಾನೂನು ಮತ್ತು ವಿದ್ಯಾರ್ಥಿಗಳ ಆಂದೋಲನವನ್ನು ಹತ್ತಿಕ್ಕಲು ನಡೆಸಲಾದ ಖಖಖಿ ಮದ್ರಾಸ್‌ನ ಅಂಬೇಡ್ಕರ್-ಪೆರಿಯಾರ್ ವಿಚಾರ ವೇದಿಕೆಯ ಮೇಲಿನ ಧಾಳಿ ಮತ್ತು ಈಗ ಎಲ್ಲ ಜನತಾಂತ್ರಿಕ ಹಕ್ಕುಗಳ ಮಾರಣಹೋಮ ಎನ್ನಬಹುದಾದ ಪುಣೆಯ ಈಖಿಖಖ ವಿದ್ಯಾರ್ಥಿಗಳ ಮೇಲಿನ ಆಕ್ರಮಣಗಳು ಮತ್ತು ದೇಶಾದ್ಯಂತ ಅವಿರತವಾಗಿ ನಡೆಯುತ್ತಿರುವ ಹತ್ತು-ಹಲವಾರು ಹಿಂದುತ್ವ ಕೋಮುವಾದಿ-ಜಾತಿವಾದಿ ದೌರ್ಜನ್ಯಗಳು, ಅದೆಷ್ಟೆ ತುಣುಕು ಘಟನೆಗಳೆಂಬಂತೆ ಕಂಡು ಬಂದರೂ, ಇದೆಲ್ಲದರ ಹಿಂದೆ ಒಂದು ಪೂರ್ವಯೋಜಿತ ಆರ್‌ಎಸ್‌ಎಸ್ ಪ್ರಚೋದಿತ ಬಹುಸಂಖ್ಯಾತ ರಾಷ್ಟ್ರವಾದದ ಕೆಟ್ಟ ವಾಸನೆ ರಾಚುತ್ತದೆ.

ಒಂದೆಡೆ ಕೋಮುವಾದಿ-ಜಾತಿವಾದಿ ದಳ್ಳುರಿಯಲ್ಲಿ ನೊಂದ ಸಂತ್ರಸ್ತರು ವರುಷಗಟ್ಟಲೆ ನ್ಯಾಯಕ್ಕಾಗಿ ಪರಿತಪ್ಪಿಸುತ್ತಿದ್ದರೆ, ಇನ್ನೊಂದೆಡೆ ಕೋಮು ಗಲಭೆಕೋರರು, ಅತ್ಯಾಚಾರಿಗಳು, ಲೂಟಿಕೋರರು ಭಯವಿಲ್ಲದೆ ಗರ್ವದಿಂದ ತಿರುಗುತ್ತಿದ್ದಾರೆ. ಆರದ ಗಾಯಕ್ಕೆ ಉಪ್ಪಿನ ವೈದ್ಯ ಮಾಡಿದಂತೆ ನೂರಾರು ಅಮಾಯಕರನ್ನು ಬಂಧಿಸಿ ಸುಳ್ಳು ಮೊಕದ್ದಮೆಗಳ ಸುಳಿಯಲ್ಲಿ ಸಿಲುಕಿಸಲಾಗಿದೆ.

ಭಾರತ, ಪ್ರಜಾತಾಂತ್ರಿಕ ಸಮಾಜವಾಗಿ ಪಕ್ವವಾಗುವ ಬದಲು ಬರ್ಬರತೆಯತ್ತ ಜಾರುತ್ತಿದೆ. ದೇಶದ ಶೋಷಿತ ಮತ್ತು ದಮನಿತ ಜನತೆ ಬಡತನದಲ್ಲಿ ಬೇಯುವುದಲ್ಲದೆ ನಿರಂತರ ಭಯದ ನೆರಳಿನಲ್ಲೇ ನರಳುವಂತಾಗಿದೆ.

**ಒಗ್ಗೂಡಿದ ಹೋರಾಟ ಇಂದಿನ ಜರೂರಿ ಆದ್ಯತೆ**

ಕಂಧಮಾಲ್ ದಿನದ ಆಚರಣೆ, ಗುಜರಾತ್ ಗಲಭೆಗಳ ಸಂತ್ರಸ್ತರ ನೆನಪು, ಇಂದು ಖಳನಾಯಕನಂತೆ ವರ್ತಿಸುತ್ತಿರುವ ಭಾರತ ರಾಜ್ಯ ವ್ಯವಸ್ಥೆಯ ವಿರುದ್ಧ ದಿಟ್ಟ ಹೋರಾಟ ನಡೆಸುತ್ತಿರುವ ತೀಸ್ತಾ ಮತ್ತು ಆನಂದ್‌ರಿಗೆ ಬೆಂಬಲ ನೀಡುವಿಕೆ, ಶೇಷಾಚಲಂ ಮತ್ತು ನೂರಾರು ಜಾತಿ ದೌರ್ಜನ್ಯಗಳ ವಿರುದ್ಧ ಕೂಗು, ಇದ್ಯಾವುದೂ ಕೇವಲ ಔಪಚಾರಿಕ ಪ್ರತಿಭಟನೆಗಳಲ್ಲ. ಬದಲಾಗಿ, ಹಿಂದುತ್ವವಾದಿ-ಪ್ರತಿಗಾಮಿ ಕೋಮುಶಕ್ತಿಗಳ ವಿರುದ್ಧ ದಿಟ್ಟ ಹೋರಾಟಕ್ಕೆ ಹುರಿಯಾಳುಗಳನ್ನು ಕಲೆಹಾಕುವುದೇ ಆಗಿದೆ. ಇನ್ನು ನಾವು ಚದುರಿ ಹೋದ, ಗಣನೆಗೆ ಬಾರದ, ಅನಾಸಕ್ತ ಬಹುಸಂಖ್ಯಾತರಾಗಿ ಉಳಿಯಬಾರದು.

## ಒಬ್ಬರಿಗಾದ ನೋವು–ನಮ್ಮೆಲ್ಲರಿಗಾದ ನೋವು

**ಎಂಬ ನುಡಿಗಟ್ಟಿನಡಿ ನಮ್ಮನ್ನು ನಾವೇ ಒಗ್ಗೂಡಿಸಲು ಮುಂದಾಗಬೇಕಿದೆ.**

# "ಅಪರಾಧವೇ ಪ್ರಧಾನವಾಗಿ ಅಪರಾಧಗಳನ್ನು ಮಾಡುತ್ತಿದ್ದರೆ, ಬಾಯಿದ್ದೂ ಸುಮ್ಮನಿರುವ ಪ್ರತಿಯೊಬ್ಬನೂ ಅಪರಾಧಿಯೇ..."

ಡಾ.ಕಲಬುರ್ಗಿಯವರು ಅಮಾನುಷ ಕೊಲೆಗೀಡಾಗಿ ಈಗಾಗಲೇ ಐದಾರು ತಿಂಗಳು ಕಳೆದು ಹೋದವು, ಕರ್ನಾಟಕ ಏನೂ ನಡೆಯಲಿಲ್ಲವೇನೋ ಎಂಬಂತೆ ತಣ್ಣಗಿದೆ... ದೊಡ್ಡ ಮದುವೆಯನ್ನು ಮಾಡಿ ಮುಗಿಸಿ ದಣಿದಿರುವ ಕೆಲ ದೃಶ್ಯ ಮಾಧ್ಯಮಗಳು ಕೂಡ ಬಡಪಾಯಿ ಸಾಹಿತಿ, ಸಂಶೋಧಕರೊಬ್ಬರ 'ಸಹಜವಾದ' ಬರ್ಬರ ಹತ್ಯೆಯನ್ನು ಮರೆತು ಇತರೆ TRP ಗಳಿಗಾಗಿ ಹುಡುಕಾಡುತ್ತಿವೆ. ಡಾ.ಕಲಬುರ್ಗಿಯವರು ಕೊಲೆಯಾದ ಈ ಸಂದರ್ಭದಲ್ಲಿ ನಮ್ಮಂತವರನೇಕರು ಆತಂಕ ಅಘಾತಗಳೊಂದಿಗೆ ನಂತರದ ಭೀಕರ ಮೌನವನ್ನು ಕಂಡು ಸಾಕಷ್ಟು ಗೊಂದಲಕ್ಕೂ ಬಿದ್ದಿದ್ದೇವೆ...! ಈ ಸಂದರ್ಭದಲ್ಲಿ ಕಾಡುವ ಅನುಮಾನಗಳನ್ನು, ಅಸಹಾಯಕತೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತಿದ್ದೇನೆ.....

ಕಲಬುರ್ಗಿಯವರ ಕೊಲೆಯ ರೀತಿ Modus-operandi ಯನ್ನು ಕಂಡ ಪೊಲೀಸ್ ಅಧಿಕಾರಿಗಳೇ "ಇದು ದಾಭೋಲ್ಕರ್, ಪನ್ಸಾರೆ ಕೊಲೆಯಂತೆಯೇ ಇದೆ" ಎನ್ನುತ್ತಿದ್ದಾರೆ. ಕಲಬುರ್ಗಿಯವರ ಮನೆಯವರು ಕೂಡ "ಅವರ ವಿಚಾರಗಳನ್ನು ಒಪ್ಪದವರೇ ಮಾಡಿರುವ ಸಾಧ್ಯತೆಯಿದೆ" ಎಂಬಂತೆ ಅನುಮಾನ ವ್ಯಕ್ತ ಪಡಿಸುತ್ತಿದ್ದಾರೆ, ಕಳೆದ ನಾಕಾರು ವರ್ಷಗಳಲ್ಲಿ ನಡೆದ ಕಲಬುರ್ಗಿಯವರ ಮೇಲಿನ ದಾಳಿಯ ಹಿನ್ನೆಲೆಯಲ್ಲಿ ಘಟನಾವಳಿಗಳನ್ನು ಕಂಡಾಗ ಅದರೊಂದಿಗೆ ಸಾಂದರ್ಭಿಕ ಸಾಕ್ಷಾಧಾರಗಳನ್ನು ಗಮನಿಸಿದಾಗ ಕೂಡ ಕಲಬುರ್ಗಿಯವರನ್ನು ಮುಗಿಸಿದವರು ಅವರಿಂದ ಅಭಿಪ್ರಾಯಭೇದವುಳ್ಳವರೇ ಎಂಬುದನ್ನು ಸೂಚಿಸುತ್ತಿವೆ. ಈ ಹಿನ್ನೆಲೆಯಲ್ಲಿ ಈ ಕೊಲೆಯನ್ನು ಬಸವಣ್ಣ ಮತ್ತು ಗಾಂಧೀಜಿಯವರ ಕೊಲೆಗಳಿಗೆ ಹೋಲಿಸಿದ್ದೇ ತಡ ಪ್ರತಿಗಾಮಿ ಮತ್ತು ಪ್ರಗತಿಪರ ಬುದ್ಧಿಜೀವಿಗಳು ಒಂದೇ ಧ್ವನಿಯಲ್ಲಿ "ಆತುರದ ತೀರ್ಪು ಬೇಡ.." ಎಂಬಂತೆ ಬುದ್ಧಿವಾದ ಹೇಳುತ್ತಿದ್ದಾರೆ. ಈ ಬಗ್ಗೆ ಯಾರೂ ಆತುರದ ತೀರ್ಪು ಅಥವಾ ತೀರ್ಮಾನ ನೀಡಿಲ್ಲ ಬದಲಿಗೆ ಮೇಲಿನ ಘಟನೆಗಳ ಆಧಾರದ ಮೇಲೆ ಇರಬಹುದಾದ ಶಂಕೆಗಳನ್ನು ವ್ಯಕ್ತಪಡಿಸುತ್ತಿದ್ದಾರಷ್ಟೆ.




ಕನಿಷ್ಠ ಇದರಿಂದಲಾದರೂ issue ಜೀವಂತವಾಗಿರುತ್ತೆ... ಸರ್ಕಾರ ಏಕಾಏಕಿ ಪ್ರಕರಣವನ್ನು ಸಿಬಿಐಗೆ ಕೊಟ್ಟ ಬಗ್ಗೆಯೂ ಯಾರೂ ಚಕಾರ ಎತ್ತುತ್ತಿಲ್ಲ..! ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಿಬಿಐ, ದಾಭೋಲ್ಕರ್, ಪನ್ಸಾರೆ ಕೊಲೆಗಳನ್ನು Cold Storage ನಲ್ಲಿಟ್ಟಂತೆಯೇ ಇದನ್ನು ಇಟ್ಟುಬಿಡುವ ಕನಿಷ್ಠ ಆತಂಕವನ್ನು ಕೂಡ ವ್ಯಕ್ತಪಡಿಸುತ್ತಿಲ್ಲ! ಈ ಸತ್ಯ ಗೊತ್ತಿರುವ ಕಾಂಗ್ರೆಸ್ ಸರ್ಕಾರ ಈ ಪ್ರಕರಣವನ್ನು ಅಷ್ಟು ಆತುರಾತುರವಾಗಿ ಸಿಬಿಐಗೆ ಕೊಟ್ಟು ಕೈತೊಳೆದುಕೊಂಡ ಉದ್ದೇಶ? ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದೇ ಅಥವಾ right wing ಅನ್ನು ಓಲೈಸುವುದೇ ಎಂಬುದನ್ನು ಕೂಡ ನಮ್ಮವರು ಆಲೋಚಿಸುತ್ತಿಲ್ಲ.! (ದಕ್ಷಿಣ ಕನ್ನಡದಲ್ಲಿ Moral Policing ನಡೆಯಲು ಬಿಟ್ಟಿರುವುದು, ರಾಘವೇಶ್ವರ ಭಾರತಿ ಹಗರಣದಲ್ಲಿ ಸರ್ಕಾರದ ನಡುವಳಿಕೆಗಳನ್ನು ಕಂಡಾಗ ಈ ಅನುಮಾನ ಬಾರದಿರದು.) ಈ ಮಧ್ಯೆ ಸಾಮಾಜಿಕ ಜಾಲತಾಣಗಳಲ್ಲಿ ಕೊಲೆಗಡುಕರನ್ನು ಸಮರ್ಥಿಸಿಕೊಂಡು, ಸರ್ಕಾರ ಅಥವಾ ಕಾನೂನಿನ ಯಾವ ಭಯಯೂ ಇಲ್ಲದೆ ಅನೇಕ Post ಗಳು ಬರುತ್ತಲೇ ಇವೆ. "ಆತುರ ಬೇಡ..." ಅನ್ನುವವರಿಗೆ ಈ ಪೋಸ್ಟುಗಳೇ ಈ ಕೊಲೆಯ ಉದ್ದೇಶವನ್ನು ವಿವರಿಸುವಂತಿವೆ. ಈ ಬಗ್ಗೆ ಮಾತ್ರ ನಮ್ಮವರಿಗೆ ಸಣ್ಣ ಅನುಮಾನವೂ ಕಾಡುವುದಿಲ್ಲ.! ದುರಂತವೆಂದರೆ ನಮ್ಮ ಪ್ರಗತಿಪರ ಬುದ್ಧಿಜೀವಿಗಳು



ಅಪ್ಪಿತಪ್ಪಿಯೂ ಈ ಬಗ್ಗೆ ಮಾತಾಡುವುದಿಲ್ಲ. ನಮ್ಮ ಸಾಹಿತಿಗಳು ಕೆಲವರು ಮಾತನಾಡಿದರೂ ಕಲಬುರ್ಗಿಯವರ ಸಂಶೋಧನೆ ಸಾಹಿತ್ಯಗಳನ್ನು ಕುರಿತಂತೆ ತಮ್ಮ ಮಾತುಗಳನ್ನು ಮೀಸಲಿಡುತ್ತಿದ್ದಾರೆ. ಇಲ್ಲಿ ಒಂದಷ್ಟು, ಆತಂಕ, ನೋವನ್ನು ಕೂಡ ತೋರುತ್ತಿಲ್ಲ!! ಕಲಬುರ್ಗಿಯವರ ಸಾವಿಗೆ ಇಂಟೆಲಿಜೆನ್ಸ್ ವೈಫಲ್ಯದ ಕಾರಣದ ಬಗ್ಗೆಯೂ ಯಾರೂ ಮಾತಾಡುತ್ತಿಲ್ಲ!? (ಸಿದ್ದರಾಮಯ್ಯನವರ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ಮುಜುಗರವಾಗಬಾರದಲ್ಲವೆ?) ಇನ್ನು ಕರ್ನಾಟಕದ ಸೆಲೆಬ್ರಿಟಿಗಳೂ ಈ ಬಗ್ಗೆ ಒಂದೇ ಒಂದು ಪ್ರತಿಭಟನೆಯ ಧ್ವನಿಎತ್ತಿಲ್ಲ. ಅಷ್ಟಿಷ್ಟು ಧ್ವನಿ ಮಾಡುವವರನ್ನು ನಮ್ಮ ಬುದ್ದಿಜೀವಿಗಳೇ ಬುದ್ದಿಹೇಳಿ ಸುಮ್ಮನಿರಿಸುತ್ತಿದ್ದಾರೆ. ಈ ಮೌನಕ್ಕೆ ಕಾರಣವಾದರೂ ಏನು? ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ ಎನಿಸಲ್ಲವೆ? ನಮ್ಮೊಳಗಿರುವ ಸಾಕ್ಷಿಪ್ರಜ್ಞೆ ಮೌನವಾದಾಗ, ನಮ್ಮೊಳಗೊಬ್ಬ ಪ್ರಾಮಾಣಿಕ ಪ್ರತಿಭಟನೆಕಾರ ನೀಗಿಕೊಂಡಾಗಷ್ಟೇ ಈ ರೀತಿಯ ಅನಾವಶ್ಯಕ ಎಚ್ಚರಗಳು, ಜಾಣಮೌನಗಳು, ಪಲಾಯನದ ನಡುವಳಿಕೆಗಳು ಜಾಗೃತಗೊಳ್ಳುತ್ತವೆ... ಡಿ.ಕೆ.ರವಿ ಸಾವಿನ ಸಂದರ್ಭದಲ್ಲಿ ಆದ ಪ್ರತಿಭಟನೆಗಳು ನಮ್ಮ ಮನಸ್ಸಿನಿಂದ ಇನ್ನೂ ಅಳಿಸಿಹೋಗಿಲ್ಲ, ಡಾ.ಕಲಬುರ್ಗಿಯವರು ತಮ್ಮ ಕುಲವಂತರಿಂದ ಗುರಿತಿಸಲ್ಪಟ್ಟಿದ್ದರೆ ಅಥವಾ ಅವರು ಹಿಂದೂ ಧರ್ಮದಲ್ಲಿರುವ ಅಸಮಾನತೆ ವಿರುದ್ಧ ಮಾತಾಡದೇ ಇದ್ದಿದ್ದರೆ, ಅವರಿಂದಾದರೂ ಒಂದಷ್ಟು ಪ್ರತಿಭಟನೆಯ ಧನಿಗಳೇಳುತ್ತಿದ್ದವೇನೊ....? ಪ್ರೊ.ಕೆ.ಎಸ್.ಭಗವಾನ್ ಈಗತಾನೇ ಪೋನ್ ಮಾಡಿ ಈ ಎಲ್ಲಾ ಆತಂಕಗಳನ್ನು ಅವರೂ ಕೂಡ ತೋಡಿಕೊಂಡರು. ತೆಲಗಿನ ವಿಪ್ಲವ ಕವಿ ಹೇಳುವಂತೆ **"ನೇರಮೇ ಪ್ರದಾನಮೈ ನೇರಾಲು ಚೇಸ್ತುಂಟೆ, ನೋರುಂಡೀ ಊರಕುನ್ನ ಪ್ರತಿಯೊಕ್ಕಡೂ ನೇರಸ್ತುಡೆ.."** ಅಂದರೆ **"ಅಪರಾಧವೇ ಪ್ರಧಾನವಾಗಿ ಅಪರಾಧಗಳನ್ನು ಮಾಡುತ್ತಿದ್ದರೆ, ಬಾಯಿದ್ದೂ ಸುಮ್ಮನಿರುವ ಪ್ರತಿಯೊಬ್ಬನೂ ಅಪರಾಧಿಯೇ..."**

–(ಕೃಪೆ: **ಡಾ.ಸಿ.ಎಸ್. ದ್ವಾರಕನಾಥ್**ರವರ ಫೇಸ್‌ಬುಕ್ ಬರವಣಿಗೆಯಿಂದ)

# ಭಾರತ ವಾಸಿಗಳಾದ ನಮಗೆ

## ಒಪ್ಪಿಗೆಇಲ್ಲ

## ಬೇಡ, ಇಂಡಿಯಾ–ಜಪಾನ್ ಅಣು ಒಪ್ಪಂದ







ಜಾಗತಿಕವಾಗಿ ಜನಪರವಾದ ಮತ್ತು ಪ್ರಕೃತಿಹಿತವಾದ ಹಸಿರು ಶಕ್ತಿ–ತಂತ್ರಜ್ಞಾನಗಳು ಜಾರಿಗೆ ಬರಬೇಕೆಂದು ದಿಟ್ಟ ಪ್ರಯತ್ನಗಳು ನಡೆಯಬೇಕಿದ್ದಾಗ, ಬಹುರಾಷ್ಟ್ರೀಯ ಅಣು ಉದ್ಯಮಗಳು ಭಾರತದಂತಹ ದೇಶಗಳನ್ನು ಬಳಸಿ ತಮ್ಮ ವಿಚ್ಛಿದ್ರಕಾರಿ ಅಣುಶಕ್ತಿ ತಂತ್ರಜ್ಞಾನವನ್ನು ಮುನ್ನಡೆಸುವ ಕುತಂತ್ರ ಮಾಡುತ್ತಿವೆ. ಈ ಹುನ್ನಾರದ ಭಾಗವೇ ಇಂಡಿಯಾ–ಜಪಾನ್ ಅಣು ಒಪ್ಪಂದ. ಈ ಮನೆಹಾಳು ಕಾರ್ಯಕ್ರಮವನ್ನು ಯೋಜಿಸಲಿಕ್ಕಾಗಿಯೇ, ಜಪಾನಿನ ಪ್ರಧಾನಿ ಶಿಂಜೊ ಅಬೆರವರು ಡಿಸೆಂಬರ್ 2015ರಲ್ಲಿ ಭಾರತಕ್ಕೆ ಭೇಟಿಯಿತ್ತರು.

**ಯಾರ ಲಾಭಕ್ಕಾಗಿ ?**

ಅರೇವಾ, ಜಿಇ, ವೆಸ್ಟಿಂಗ್‌ಹೌಸ್, ಹಿಟಾಚಿ, ತೊಶಿಬಾ, ಮಿತ್ಸುಬಿಶಿ, ಮುಂತಾದ ಬೃಹತ್ ಕಾರ್ಪೋರೇಟ್ ಉದ್ಯಮಗಳಿಗೆ ಅಪರಿಮಿತ ಲಾಭ.

ಅಧಿಕಾರದಾಹಿ, ಭ್ರಷ್ಟ ರಾಜಕೀಯ ಪಕ್ಷಗಳಿಗೆ, ಈ ದೇಶದಲ್ಲಿ ತಮ್ಮ ವಿಕೃತ–ಸಂಕುಚಿತ ಅಜೆಂಡಾಗಳನ್ನು ಮುಂದಾಗಿಸಲು ಅಣುಶಸ್ತ್ರ ಪೈಪೋಟಿ ಅವಶ್ಯಕ. ತಮ್ಮ ಅವರ ಯುದ್ಧದಾಹಿ ಮತ್ತು ಶಾಂತಿವಿರೋಧಿ ನಿಲುವುಗಳಿಗೆ ಈ ಒಪ್ಪಂದ ಸಹಾಯಕ.

* ಜಪಾನಿನ ದುರಂತ ಅಣುಚರಿತ್ರೆ
* ಫುಕುಶಿಮಾ ಅಣು ಅಪಘಾತ(2011 )
* ಹಿರೋಶಿಮಾ ಮತ್ತು ನಾಗಸಾಕಿ(1945)

**ಇಂಡಿಯಾ–ಜಪಾನ್ ಅಣು ಒಪ್ಪಂದ, ಹಾನಿಕಾರಿ ಹಾಗೂ ಅಪಾಯಕಾರಿ ಹೇಗೆ?**

ಈಗಾಗಲೇ ಫುಕುಶಿಮಾ ಅಪಘಾತದಲ್ಲಿ ಆಯೋಜಿತ ಅಣು ಶಕ್ತಿ ಯೋಜನೆಗಳ ಸುತ್ತಮುತ್ತಲಿರುವ ರೈತಾಪಿ ಮತ್ತು ಮೀನುಗಾರ ಜನಾಂಗಗಳ ಜೀವನೋಪಾಯಗಳಿಗೆ ಹಾನಿ ಮತ್ತು ಕೇಳರಿಯದ ಅನಾರೋಗ್ಯದ ಪೀಡನೆ.

ಈಗಾಗಲೆ ವಿಜ್ಞಾನ ಸಂಶೋಧನೆಗಳು ನಿಗದಿಸಿರುವಂತೆ ಅಣುಶಕ್ತಿ ವಿಕಿರಣ ಪರಿಸರದ ಮೇಲೆ ಅತಿ ದೀರ್ಘಕಾಲೀನ ಪ್ರತಿಕೂಲ ಪರಿಣಾಮ ಬೀರುತ್ತದೆ.

ಅಣುವಿಕಿರಣಕ್ಕೆ ದೇಶ, ಕಾಲ, ಮತ್ತು ಗಡಿಗಳ ಅಂಕೆಯಿಲ್ಲ. ಜನಸಾಮಾನ್ಯರಿಗೆ ಅಣುಶಕ್ತಿ ಯೋಜನೆಯಿಂದ ವಿಕಿರಣದ ಮತ್ತು ಮಿಲಿಯಾಂತರ ಕಾಲದ ನರಳಾಟವೊಂದೆ ಬಳುವಳಿ.

**ಹೋರಾಟ ಅನಿವಾರ್ಯ!**

2015 ಡಿಸೆಂಬರ್ 11–13ರವರೆಗೆ ದೇಶಾದ್ಯಂತ ಅಣುಶಕ್ತಿ ವಿರೋಧಿ ಪ್ರದರ್ಶನಗಳು ಹಾಗೂ ಪ್ರತಿಭಟನೆಗಳು ನಡೆದವು. **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'**(ನವ ಸಮಾಜವಾದಿ ಪರ್ಯಾಯ) ಸಂಗಾತಿಗಳು ಬೆಂಗಳೂರಿನಲ್ಲಿ **,ಪೀಪಲ್ಸ್ ಸಾಲಿಡಾರಿಟಿ ಕನ್ಸರ್ನ್ಸ್,** ವೇದಿಕೆಯಡಿ ಡಿಸೆಂಬರ್ 12ರಂದು ಪ್ರತಿಭಟಿಸಿದರು. ಭಾರತ ಸರ್ಕಾರದ ಈ ಅಣುಗ್ರಸ್ತ ಪೀಡೆಯನ್ನು ವಿರೋಧಿಸಿ, ಈ ಜನವಿರೋಧಿ–ಪರಿಸರ ವಿರೋಧಿ ಅಣು ಒಪ್ಪಂದ ಬೇಡ ಎಂದು ನಿರಂತರವಾಗಿ ಅರ್ಭಟಿಸೋಣ.

# ಹೋರಾಟ ಹಲವಾರು....

ಭಾರತಕ್ಕೆ ಮೋದಿ ಸನ್ನಿಪಾತ ಆವರಿಸಿದ ಮೇಲೆ ರಾಜಕೀಯ ಪ್ರತಿಭಟನಾ ಚಟುವಟಿಕೆಗಳಿಗೆ ಸಂದರ್ಭಗಳು ಹಲವು–ಹತ್ತಾರು. **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'**(ನವ ಸಮಾಜವಾದಿ ಪರ್ಯಾಯ) 2015 ಜನವರಿಯಿಂದ– ಡಿಸೆಂಬರ್ ರವರೆಗೆ ಹಲವಾರು ಪ್ರತಿಭಟನೆ–ಹೋರಾಟಗಳಲ್ಲಿ ತೊಡಗಿಸಿಕೊಂಡಿದೆ. ಮೇ ತಿಂಗಳಿನಿಂದ ಇದುವರೆವಿಗೂ ನಿರಂತರವಾಗಿ ಘಂಟೆಗೆ ರೂ.100/– ಕನಿಷ್ಠ ವೇತನದ ಪ್ರಚಾರ ಚಳುವಳಿ ನಡೆಸಿರುವುದೇ ಅಲ್ಲದೆ, ಕೋಮುವಾದ–ಜಾತಿವಾದ, ಕಾರ್ಮಿಕ ವಿದ್ಯಾರ್ಥಿ ಹಕ್ಕುಗಳು, ಮಹಿಳಾ ಅಸಮಾನತೆ ಮತ್ತು ಲೈಂಗಿಕ ಅಲ್ಪಸಂಖ್ಯಾತರ ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡಿದೆ. ಎಲ್ಲಾ ಸಂದರ್ಭಗಳ ಫೋಟೊ ದಾಖಲೆ ಮತ್ತು ವಿವರಗಳು **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'** ನ ಅಂತರ್ಜಾಲ ತಾಣವಾದ www.socialism.in ಮತ್ತು ಫೇಸ್‌ಬುಕ್ ಪುಟಗಳಲ್ಲಿ ಕಾಣಸಿಗುತ್ತವೆ. ಈ ಕೆಳಗೆ ಕೆಲವೊಂದು ಆಯ್ದ ಹೋರಾಟ ಪ್ರತಿಭಟನೆಗಳ ಚಿತ್ರ–ವಿವರಗಳನ್ನು ನೀಡಲಾಗಿದೆ.

# Protests galore.....

***Right from the very begining since the Modi Mania started its grip on the administration, there have been umpteen issues on which political protest activism has become necessary. Though the democratic space for protest and dissent has been shrinking increasingly, nevertheless radical forces have hit the streets time and against the communal, casteist and agresively capitalist regime of Modi/RSS combine. New Socialist Alternative(CWI-India) has initiated many such protests and participated energetically in many activities. All those events have been photo documented in the website : www.socialism.in and face book page. We bring some of the selected events photos for the readers here.***




ಬೆಂಗಳೂರು ಮತ್ತು ಪುಣೆ ನಗರಗಳಲ್ಲಿ **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'**ನ ಸಂಗಾತಿಗಳು ಎಫ್‌ಟಿಐಐ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

Both in Bangalore and Pune the comrades of New Socialist Alternative(CWI-India) actively took part in the protest in relation to FTII struggle.

ಸಂಘಪರಿವಾರದ ಕಿಡಿಗೇಡಿ ಗೂಂಡಾಗಳಿಂದ



ವಿಚಾರವಾದಿಗಳ, ಹೋರಾಟಗಾರರ ದಮನ ಹತ್ಯೆಗಳು ದಿನೇ–ದಿನೇ ಹೆಚ್ಚುತ್ತಿವೆ. ಬರಹಗಾರ–ಸಂಶೋಧನಕಾರ ಎಂ.ಎಂ. ಕಲಬುರ್ಗಿರವರ ಹತ್ಯೆ ನಡೆದ ಸಂದರ್ಭದಲ್ಲಿ ಇನ್ನಿತರ ರಾಜಕೀಯ ಸಕ್ರಿಯರೊಂದಿಗೆ ಸೇರಿ **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'** ಪ್ರತಿಭಟನೆ ನಡೆಸಿತು.

Day by day the goons of Sangh parivar are attacking and killing rationalists and political activists. The New Socialist Alternative along with other progressive political forces condemned and protested the dastardly killing of writer and research scholar Dr.M.M.Kalburgi.

ಒಡಿಶಾದ ಕಂದಮಾಲ್ ಸಂತ್ರಸ್ತರಿಗೆ ನ್ಯಾಯ ಇನ್ನೂ ದೊರಕಿಲ್ಲ. ಅವರನ್ನು ಬೆಂಬಲಿಸಿ **ಪೀಪಲ್ಸ್**



**ಸಾಲಿಡಾರಿಟಿ ಕನ್ಸರ್ನ್ಸ್** ಆಗಸ್ಟ್ 2015ರಲ್ಲಿ ಪ್ರದರ್ಶನ ನಡೆಸಿತು.

The vicitims of Kandhamal, Odisha are yet to get justice. Peoples' Solidarity Concerns- Bangalore continued its supports in August 2015 through a solidarity event.




ಕೋಮುವಾದದ ಪಿಡುಗು ಸಮಾಜದ ಪ್ರತಿಯೊಂದು ವಿಚಾರ ಆಚರಣೆಗಳಲ್ಲಿ ಮೂಗು ತೂರಿಸುತ್ತಿದೆ. ಇಂದು ಬಡಜನತೆ ಆಹಾರದ ಆಯ್ಕೆಯನ್ನು ಸಂಘಪರಿವಾರದ ವರಿಷ್ಠರು ತಾಕೀತು ಮಾಡುತ್ತಿದ್ದಾರೆ. ಗೋಹತ್ಯೆ–ಮಾಂಸದ ಹೆಸರಿನಲ್ಲಿ ದಾದ್ರಿಯ ಅಮಾಯಕ ಅಖಲಕ್ ಹತ್ಯೆಯಾದ.

The venom of the communalism and casteism is taking its toll on Downtrodden sections. Akhalaq of Dadri was lynched and killed for allegedly consuming beef!




ಪ್ರಫುಲ್ ಬಿದ್ವಾಯಿ– ಅಂಕಣಕಾರ ಮತ್ತು ರಾಜಕೀಯ ಹೋರಾಟಗಾರ. ಇವರ ಹಠಾತ್ ನಿಧನ ರ‍್ಯಾಡಿಕಲ್ ಹೋರಾಟಗಾರರಿಗೆ ದೊಡ್ಡ ಆಘಾತ. ಪ್ರಫುಲ್‌ರ ಇತ್ತೀಚಿನ ಬರವಣಿಗೆಯಾದ 'ದಿ ಫೋನಿಕ್ಸ್ ಮೊಮೆಂಟ್' (ಭಾರತದ ಎಡ ಚಳುವಳಿಯ ಬಗ್ಗೆ) ಪುಸ್ತಕದ ಬೆಂಗಳೂರು ಬಿಡುಗಡೆಯ ಸಂದರ್ಭದಲ್ಲಿ ಇನ್ನಿತರ ಸಂಘಟನೆಗಳೊಂದಿಗೆ **'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'** ಕೂಡ ಕೈಜೋಡಿಸಿತ್ತು.

Praful Bidwai was a sympathiser and cothinker of New Socialist Alternative. His sudden and untimely death is a loss to the radical political activism. New Socialist Alternative was the part of book release 'The Phoenix Moment' (a critique on the Left Parties) penned by Praful.

ಜಪಾನಿನ ಪ್ರಧಾನಿ ಶಿಂಜ಼ೊ ಅಬೆರವರ ಅಣು ಪ್ರಸರಣ ಯಾತ್ರೆಯನ್ನು ವಿರೋಧಿಸಿ.

Protesting Japan's PM Shinjo Abe's Nuclear proliferation tourism.




**'ನ್ಯೂ ಸೋಶಿಯಲಿಸ್ಟ್ ಆಲ್ಟರ್ನೇಟಿವ್'**ನ ಸಂಗಾತಿಗಳು ಮುಸ್ಲಿಂ ಮತ್ತು ದಲಿತ ಯುವಜನಾಂಗದ ಮೇಲೆ ಹೆಚ್ಚುತ್ತಿರುವ ಸುಳ್ಳು ಮೊಕದ್ದಮೆಗಳನ್ನು ವಿರೋಧಿಸಿ ಕೇರಳದಲ್ಲಿ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಪಾಲ್ಗೊಂಡರು.

Leading comrades of New Socialist Alternative(CWI-India) travelled to Kerala for participating in the convention against fabricated cases on Muslim and Dalith youth.



*ಪುಟ 8 ರಿಂದ* ..................................

## "ಅಂಬೇಡ್ಕರ್ ಹೆಸರಲ್ಲಿ ಹೊಸ ನಾಟಕ.....

**ಇದೊಂದು ಪರೋಕ್ಷ ಮಾರ್ಗವಾಗಿದೆ. ಹಾಗೆ ನೋಡಿದರೆ, ಸಂವಿಧಾನದೊಂದಿಗೆ ಬಿಜೆಪಿಗೆ ಯಾವುದೇ ಸಂಬಂಧವಿಲ್ಲ. ರಾಷ್ಟ್ರವಾದಿಗಳು ಎಂದು ಹೇಳಿಕೊಳ್ಳುವ ಹಿಂದೂವಾದಿಗಳು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲೇ ಇಲ್ಲ. ನಮಗೆ ದೊರೆತಿರುವ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯದಲ್ಲಿ ಇವರ ಕೊಡುಗೆ ಏನೂ ಇಲ್ಲ. ದೇಶಕ್ಕೆ ಇವರ ಕೊಡುಗೆ ದೊಡ್ಡ ಶೂನ್ಯ! ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಂಘ ಪರಿವಾರ ಹಾಗೂ ಬಿಜೆಪಿ ಪೂರ್ವಜರು ಬ್ರಿಟಿಷರ ಜತೆಗೆ ಕೈಜೋಡಿಸಿದ್ದರು.**

ಇದು ನೂರಕ್ಕೆ ನೂರರಷ್ಟು ಸತ್ಯ. ಬೇಕಾದರೆ ನನ್ನ ಈ ಅಭಿಪ್ರಾಯವನ್ನು ಪತ್ರಿಕೆಗಳು ತಮ್ಮ ಮುಖಪುಟದಲ್ಲಿ ದೊಡ್ಡ ಶೀರ್ಷಿಕೆಗಳಲ್ಲಿ ಅಚ್ಚು ಹಾಕಲಿ. ನನ್ನ ಈ ಹೇಳಿಕೆಗೆ ನಾನು ಬದ್ಧ. ಬಿಜೆಪಿಯವರು ಸರ್ದಾರ ವಲ್ಲಭ ಭಾಯ ಪಟೇಲ್ ಅವರನ್ನು ಹೊಗಳಿದರು. ಈಗ ಅಂಬೇಡ್ಕರ ಅವರನ್ನು ಹಾಡಿ ಹೊಗಳುವ ಹೊಸ ವರಸೆ ಆರಂಭಿಸಿದ್ದಾರೆ. ಈ ಮೂಲಕ ಅಂಬೇಡ್ಕರ ಅವರನ್ನು ಆಪೋಶನ ತೆಗೆದುಕೊಳ್ಳಲು ಹೊರಟಿದ್ದಾರೆ.

ಅಂಬೇಡ್ಕರ ಹೆಸರಲ್ಲಿ ಹೊಸ ನಾಟಕ ಆರಂಭಿಸಿದ್ದಾರೆ. ಬಾಬಾಸಾಹೇಬ್ ಜಾರಿಗೆ ತಂದ ವ್ಯವಸ್ಥೆ ಬದಲಿಸುತ್ತೇವೆ ಎಂದರೆ ದೊಡ್ಡ ಜನಪ್ರವಾಹ ಮುಗಿ ಬೀಳುತ್ತದೆ. ಅದಕ್ಕಾಗಿಯೇ ಅವರು ತೋರಿಕೆಗೆ ಪಟೇಲ್ ಅಂಥವರ ಹೆಸರನ್ನು ಗುರಾಣಿಯಂತೆ ಬಳಸಿ ತಮ್ಮ ಕೆಲಸ ಸಾಧಿಸಿಕೊಳ್ಳುತ್ತಾರೆ. ಜನರು ಈ ಸಂಚನ್ನು ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್‌ಗೂ ಜಾತಿ ವ್ಯವಸ್ಥೆಯ ಪಥವನ್ನು ಮುರಿಯುವುದು ಬೇಕಿಲ್ಲ. ಬದಲಾವಣೆ ಬರುವುದಾದರೆ ವಿರೋಧಿಸುವುದಿಲ್ಲ ಎನ್ನುವ ಧೋರಣೆ ಅವರದ್ದು. ಆದರೆ, ಬದಲಾಗುವುದು ಅವರಿಗೆ ಮನಃಪೂರ್ವಕವಾಗಿ ಬೇಕಿಲ್ಲ.

ಸಮಾಜದ ಹಾಗೂ ವ್ಯವಸ್ಥೆಯ ಕಟ್ಟ ಕಡೆಯ ವ್ಯಕ್ತಿಗೂ ಅಧಿಕಾರ, ಸಂಪತ್ತು ಸಿಗಬೇಕು ಎನ್ನುವುದು ಅಂಬೇಡ್ಕರ ಆಶಯ ಆಗಿತ್ತು. ಅವರು ಸಮಾಜದ ಭಾಗವಾಗಬೇಕು. ಅದಕ್ಕಾಗಿ ಬದಲಾವಣೆಯ ಅಗತ್ಯವಿದೆ ಎನ್ನುವುದು ಅಂಬೇಡ್ಕರ್ ನಿಲುವಾಗಿತ್ತು. ಅಂಬೇಡ್ಕರ್ ಅವರು ಬದಲಾವಣೆಯ ಪರವಾಗಿದ್ದರು. ಆದರೆ ಬಿಜೆಪಿಯವರು ಅದಕ್ಕೆ ವಿರೋಧವಾಗಿದ್ದಾರೆ. ಅವರಿಗೆ ಬಾಬಾಸಾಹೇಬ್ ಅವರ ತತ್ವಗಳನ್ನು ಅನುಸರಿಸಲು ಆಗದು.

*** ಸಾಂಸ್ಕೃತಿಕ ದಬ್ಬಾಳಿಕೆ, ಬಲವಂತವಾಗಿ ಆಹಾರ ಸಂಸ್ಕೃತಿ ಹೇರಿಕೆ ಬೆಳವಣಿಗೆಗಳನ್ನು ಹೇಗೆ ಅರ್ಥೈಸುವಿರಿ?**

ಸಾಂಸ್ಕೃತಿಕ ದಬ್ಬಾಳಿಕೆ ಶತಮಾನಗಳಿಂದಲೂ ವ್ಯವಸ್ಥಿತವಾಗಿ ಸದ್ದಿಲ್ಲದೆ ನಡೆದುಕೊಂಡು ಬಂದಿದೆ. ಜನರ ತಲೆಯಲ್ಲಿ ಸಂವಿಧಾನದ ಬದಲು ಮನುಸ್ಮೃತಿಯನ್ನು ತುರುಕುವ ಸಂಚು ನಿರಂತರವಾಗಿ ನಡೆಯುತ್ತಿದೆ. ಶೋಷಿತರ ಆಹಾರ, ಧಾರ್ಮಿಕ ಸಂಸ್ಕೃತಿಯ ಮೇಲೂ ನಿರಂತರ ದಾಳಿ ನಡೆಯುತ್ತಿದೆ. ಇಲ್ಲಿಯವರೆಗೆ ಸದ್ದಿಲ್ಲದೆ ನಡೆಯುತ್ತಿದ್ದ ದಾಳಿ ಈಗ ಹೆಚ್ಚು ಸದ್ದು ಮಾಡುತ್ತಿದೆ.

*** ಸಂವಿಧಾನ ಪರ ಮತ್ತು ವಿರೋಧಿ ಎಂದು ಸಮಾಜ ಇಬ್ಭಾಗವಾಗುವ ಸಾಧ್ಯತೆ ಇದೆಯೇ?**

2019ರ ಲೋಕಸಭಾ ಚುನಾವಣೆ ಸಂವಿಧಾನ ಪರ ಮತ್ತು ವಿರೋಧಿಗಳ ಸೆಣಸಾಟ ಆಗಲಿದೆ. ಸಂವಿಧಾನ ವಿರೋಧಿ ಶಕ್ತಿಗಳ (ಬಿಜೆಪಿ, ಸಂಘ ಪರಿವಾರ ಹಾಗೂ ಹಿಂದುತ್ವವಾದಿಗಳು) ವಿರುದ್ಧ ಸಂವಿಧಾನ ಪರವಿರುವ ಶಕ್ತಿಗಳು ಒಗ್ಗೂಡಲಿವೆ.

*** ದಲಿತ ಸಂಘಟನೆಗಳು ದಾರಿ ತಪ್ಪಿವೆಯೇ? ಚಳವಳಿಗಳು ಅರ್ಥ ಕಳೆದುಕೊಳುತ್ತೀವೆ ಎಂದು ಅನಿಸುತ್ತಿದೆಯಾ? ದಲಿತರು ಯಾಕೆ ಸಂಘಟಿತರಾಗುತ್ತಿಲ್ಲ?**

ಮೇಲ್ವರ್ಗದವರು ತಮ್ಮ ಬಳಿ ಇರುವ ಅಧಿಕಾರ ಉಳಿಸಿಕೊಳ್ಳಲು ಸಂಘಟಿತರಾಗುತ್ತಾರೆ. ದಲಿತರು ತಮ್ಮಲ್ಲಿ 'ಏನಿದೆ' ಎಂದು ಸಂಘಟಿತರಾಗುತ್ತಾರೆ. ಆರ್ಥಿಕ ಶಕ್ತಿ ಇಲ್ಲದ ಕಾರಣ ದಲಿತರು ಸುಲಭ ವಿಭಜನೆಗೆ ಗುರಿಯಾಗುತ್ತಿದ್ದಾರೆ. ರಾಜಕೀಯ ಪಕ್ಷಗಳು ದಲಿತ ಮುಖಂಡರಿಗೆ ಆಮಿಷ ಒಡ್ಡಿ ಅವರನ್ನು ವಿಭಜಿಸುತ್ತಿದ್ದಾರೆ. ದಲಿತರು ಹೊಟ್ಟೆ ಹೊರೆಯಲು ಹೀಗೆ ಮಾಡುತ್ತಿದ್ದಾರೆ. ಇಲ್ಲಿ ಅವರ ಮನಸ್ಥಿತಿ ಮುಖ್ಯವಾಗುತ್ತದೆ. ಇದರಿಂದಾಗಿ ದಲಿತರು ಮತ್ತು ದಲಿತ ನಾಯಕರಲ್ಲಿ ಇನ್ನೂ ಕೂಡ ಡಿವಿಷನ್ (ವಿಭಜನೆ) ಮತ್ತು ಕನ್‌ಫ್ಯೂಷನ್(ಗೊಂದಲ) ಇನ್ನೂ ಮುಂದುವರೆದಿದೆ.

*** ವೈಯುಕ್ತಿಕವಾಗಿ ಅಜ್ಜನ ಬಗ್ಗೆ ಹೇಳದೆ ಉಳಿದಿದ್ದೇನಿದೆ?**

ಡಾ. ಬಾಬಾಸಾಹೇಬ ಅಂಬೇಡ್ಕರ ಈ ದೇಶಕಂಡ ಅಪ್ರತಿಮ ಬುದ್ಧಿಜೀವಿ, ಜ್ಞಾನಿ. ಈಗಿನ ವ್ಯವಸ್ಥೆ ತುಂಬಾ ಹಾಳಾಗಿದೆ. ಅವರು ಇದ್ದಿದ್ದರೆ ವ್ಯವಸ್ಥೆ ಹಾಳಾಗಲು ಬಿಡುತ್ತಿರಲಿಲ್ಲ. ಅವರು ದೀನ, ದಲಿತರು, ಶೋಷಿತರು ಹಾಗೂ ಹಿಂದುಳಿದ ಜನರಲ್ಲಿ ನೈತಿಕತೆ ತುಂಬುತ್ತಿದ್ದರು.

